# ಮನವಿ

ಶ್ರೀನಿವಾಸ



ಜೀವನ ಕಾರ್ಯಾಲಯ
ಬಸವನಗುಡಿ
ಬೆಂಗಳೂರು

ಶ್ರೀ ವಿ. ಸೀ. ಇವರಿಗೆ
ನಿಮ್ಮ ಪ್ರೀತಿ ಆದರಗಳನ್ನು ನೆನೆದು
ಕೃತಜ್ಞತೆಯಿಂದ ಒಪ್ಪಿಸಿದ್ದು
ಶ್ರೀನಿವಾಸ
ಬೆಂಗಳೂರು
23.6.51

# ಮನವಿ

ಶ್ರೀನಿವಾಸ



ಜೀವನ ಕಾರ್ಯಾಲಯ
ಬಸವನಗುಡಿ
ಬೆಂಗಳೂರು

ಮೊದಲ ಮುದ್ರಣ
೧೯೫೧

ಬೆಲೆ ಹನ್ನೆರಡಾಣೆ







ಬೆಂಗಳೂರು ಪ್ರೆಸ್
ಮೈಸೂರು ರೋಡು, ಬೆಂಗಳೂರು ಸಿಟಿ

# ವಿಷಯ ಸೂಚಿ

# ಮನವಿ

ಶ್ರೀರಾಗ

ಎನ್ನ ಜೀವದಜೀಯ ಚೆನ್ನಕೇಶವರಾಯ
ನಿನ್ನಡಿಯೊಳೆಸಗುವೀಮನವಿಯನು ಕೇಳು

ನಾನೆಂಬಿದನುಮಾಡಿ ಲೋಕದೀಲೀಲೆಯಲಿ
ತಾಣ ಒಂದನು ಇದಕೆ ನೀಡಿ ಸತತ
ಏನೊಂದ ಕುಂದಿಲ್ಲದಂತೆ ಪೊರೆದಿರುವ ಅಭಿ
ಮಾನಿ ನೀನೇ ನುಡಿಸಿದೀ ನುಡಿಯನು

ದೇವನೀನಿತ್ತ ಬದುಕಿನ ಬಹಳ ಕರ್ಮದಲಿ
ಯಾವವನು ನಿನ್ನಡಿಯ ನೆನವ ಹಿಡಿದು
ಗೈವೆವಾ ಕರ್ಮಬಳಿತಹವೆಂದರಾರ್ಯಜನ
ಆ ವಿಧದ ಕರ್ಮ ಬೆಳೆಯಲಿ ನನ್ನಲಿ

ಈ ತೆರದ ಕರ್ಮವಾಗಲಿ ಎಂದು ನಾ ಮನದಿ
ಹಾತೊರೆದು ಮಾಡುತಿಹ ಮನವಿಯಿದನು
ಪ್ರೀತಿಯಲಿಕೇಳ್ದೆನ್ನನುದ್ಧರಿಸು ಹೇಜಗ
ನ್ನಾಥ ಮನ್ನಾಥ ಶ್ರೀ ಶ್ರೀನಿವಾಸ

# ಅರಕೆ

ಮುಖಾರಿ

ಅರಸುವುದು ಜಗವು ನಿನ್ನನು ಶ್ರೀನಿವಾಸ
ಹರಿಯೆಂದು ಹರನೆಂದು ವರಪಿತಾಮಹನೆಂದು

ಬರೆವನಿವ ಗ್ರಂಥವನು ಹರಿವನಿನ್ನೊರ್ವನದ
ಪರಿಪರಿಯ ಮಾತ ನಿಜವೆಂಬರೆಲ್ಲ
ಸರಿಯೆಂಬನೊರ್ವ ಸರಿಯಲ್ಲೆಂಬ ನಿನ್ನೊರ್ವ
ಸರಿಯೆಂಬ ಅಲ್ಲೆಂಬ ಜನವು ಎಲ್ಲಾ

ಸತ್ಯವೆಂಬುದು ರೂಪವೆತ್ತ ಸೊಗಸೆನ್ನುವುದು
ತತ್ವಜ್ಞಾನದಿ ಸುಖದ ಇಚ್ಛೆಯಲಿ ತಿಳಿದು
ಹತ್ತು ಕರಣಗಳಿಂದ ಹತ್ತಾಗಿ ಕಾಣುತಾ
ಮತ್ತೊಂದು ಬೇರೊಂದು ಹೆಸರಿಂದ ಕರೆಯುತಾ

ನೂರಾರು ಕಡೆಯಿಂದ ಸೇರಿ ಬಂದಿರುವೆಗಳು
ಬಾರಿ ಬಾರಿಗೆ ಬಂದನೊಂದಡ್ಡ ಕಟ್ಟಿ
ಸಾರೆಯೊಳಗಿರುವಿನಿಸು ಸಕ್ಕರೆಯ ಸೇರುವರೆ
ತಾರಾಡುವಂತೆ ತಾರಾಡಿ ಹರಿಹರಿದೋಡಿ

# ಮರೆ

**ಕೇತಾರಗೌಳ**

ಎಲ್ಲವ ನೋಡಿದೆನು ಎಲ್ಲಿಯು
ನಿನ್ನ ನೋಡಲಿಲ್ಲ

ಎಲ್ಲ ರೂಪದ ಸೊಗಸನು ನೋಡಿದೆ
ಎಲ್ಲ ಗಂಧವ ರಸವನು ನೋಡಿದೆ
ಎಲ್ಲ ಸೌಖ್ಯದ ರೀತಿಯ ನೋಡಿದೆ
ಎಲ್ಲವನಾಶಿಸಿ ನಿನ್ನ ನೋಡದೆ

ಆಹಾ ಎಂದಾಶಿಸಿ ಸುಖವಿಲ್ಲ
ಮೋಹವು ಜೊತೆಯಲಿ ಖೇದವ ತಹುದು
ಮೋಹವನುಳಿದು ನೋಡುವ ಎನಲದು
ಸಾಹಸ ವರ್ತನವಾಗಿದೆ ದೇವ

ಮರೆಯಿಸಿ ನಿನ್ನನು ನಿನ್ನ ಮಹಿಮೆ
ತೆರತೆರನಾಗಿ ಹರಡಿತು ಎಲ್ಲೆಡೆ
ಮರೆಯುಳಿಯದೆ ನೀನಿಂತು ನಿಂತಿರೆ
ಅರಿಯಲಾರೆ ಅರಸಲಾರೆ

# ಮುಗ್ಧ

### ತೋಡಿ

ನಾನೇ ಬೇಡಿದೆನೇ ಮರೆಯೆಂದು
ನಾನೇ ಮೌಢ್ಯದ ಛಲದಲಿ ಕೇಳ್ದೆನೆ

ನೀನು ಬೇಡ ನಿನ್ನ ಚಿತ್ರವ ನೋಳ್ಪೆನು
ಶ್ರೀನಿವಾಸ ಈ ಲೋಕದಿ ರೂಪವಿ
ತಾನವತಳೆದು ಎನಗೆ ಕಾಣು ಎಂದು
ನಾನೇ ಮುಗುದಾಗಿ ಬೇಡಿದೆನೇ ಹರಿ

ಮನೆಯ ಮುಂದಿನೀ ಪ್ರಕೃತಿಯ ಶೋಭೆಯ
ಅನುಭವಿಸಲ್ ಮನ ಅರಿಯದಿದೆ
ಇನಿತು ಮಾತ್ರದಾ ಸೊಬಗಿಗೆ ಚಿತ್ರದಿ
ನನೆಕೊನೆ ಪೋಗುವುದಲೆ ನಲಿದು

ಎನ್ನ ರೂಪಿನ ಬಿಂಬವನು
ಕನ್ನಡಿಯಲಿ ನೋಡಲು ಮಗು ಬಯಸಿ
ಚಿನ್ನ ನಾನಿಹೆನಿಲ್ಲಿ ಎಂದೊಡೆ ಒಪ್ಪಳು
ಕನ್ನಡಿಯಲಿ ಬಾರೆಂದು ಕಾಡುವಳು

# ಸಾಮ್ಯ

## ಕಾಂಭೋಜಿ

ಸಾಮ್ಯವನು ಕೇಳಿ ಮನ ತಣಿಯದಯ್ಯ
ಸ್ವಾಮಿ ನೀನಿರುವುದನು ನಿಜದಿ ಕಾಣದೆ ಬರಿಯ

ಕೆಂದಾವರೆಯತೆರದ ಚೆಲುವು ನಿನ್ನಡಿಯೆಂದು
ಚಂದ್ರನೊಂದಂದ ಸಿರಿ ಮೊಗದೊಳೆಂದು
ಸಂದನೀಲೋತ್ಪಲದ ಬೆಡಗ ಕಣ್ಣುಗಳೆಂದು
ಬಂದು ಹೋದವರೆಲ್ಲ ಹೇಳಿರುವರು

ಕೆಂದಾವರೆಯನೋಡಿ ನೀಲೋತ್ಪಲವ ನೆನೆದು
ಚಂದ್ರನಂದದ ಮೊಗವ ನೆನೆದು ಮನಕೆ
ತಂದುಕೊಳ್ಳಲು ನೋಡಿ ಸೋತಿಹುದು ಚೇತನ
ಒಂದು ರೂಪಾಗದಿದೆ ಇವರ ನೆನಹು

ಮಲ್ಲಿಗೆಯ ಬಣ್ಣವನು ಹಾಲಿನಲಿ, ಗಂಧವನು
ಒಳ್ಳೆ ಭಟ್ಟಿಯ ಸಾರದಲ್ಲಿ, ಮುಗುವ
ಸಲ್ಲಲಿತ ದೇಹದಲಿ ಮಾರ್ದವವ, ತೋರಿರಲು
ಬಲ್ಲದೇ ಮನಸು ಮಲ್ಲಿಗೆಯ ನೆನೆಯ ?

# ಮರವು

ಆರಭಿ

ಎಲ್ಲ ಗತಿಯೊಳು ಮನವು ನಿನ್ನ ನೆನೆಯುವ ತೆರದೆ
ಫುಲ್ಲಲೋಚನ ಎನಗೆ ವರವ ನೀಡು

ಅಂದು ನಿನ್ನಯ ಕೃಪೆ ಇಲ್ಲವೋ ಎಂದೆಂಬ
ಸಂದೇಹವಿರಲು ಮನ ಮತ್ತೆ ಮತ್ತೆ
ತಂದೆ ನಿನ್ನನು ನೆನೆಯುತಿರ್ದುದೈ ನಿನ್ನ ಕೃಪೆ
ಬಂದಂತೆ ತೋರುತಿರಲಿಂದು ತಾನು
    ಮಂದವಾಗಿಹುದು ಹರಿ ಬಂದ ಸುಖದೊಳು ನಿನ್ನ
    ಅಂದು ನೆನೆದಂತೆ ನೆನೆಯದು ನಿತ್ಯವು
    ತಂದೆ ಸುಖವಿರೆ ಹೋಗೆ ನಿನ್ನಪದದಲಿ ಭಕ್ತಿ
    ಎಂದಿನಂತಿರಲಯ್ಯ ಎನ್ನ ಮನದೆ

ಮಳೆಬರುವ ಮುನ್ನ ಬಿಸಿಲಿನ ಝಳದಿ ಜಗವೆಲ್ಲ
ತೊಳಲುತಿರೆ ಖೇದದಿಂದಳಲುವಿಳೆಯು
ಮಳೆಯ ಬೇಡುವುದೆನಲು ಸುಳಿಯುತೆಲ್ಲೆಡೆಯುಂದೆ
ಸೆಳೆ ಮಿಂಚು ಮುಗಿಲೊಡ್ಡಿ ಸೀಳುವಂತೆ
    ಕಲಕಂಠ ನಿನದವದು ಕೇಳುತಿದ್ದುದು. ಈಗ
    ಮಳೆಬರಲು ಕೇಳದಂದಿನ ದನಿಗಳ
    ಸೆಲೆಯೆನಲು ಕೇಳ್ವುದೊಮ್ಮೊಮ್ಮೆ ಸಂಜೆಯಲಿ ನಿ
    ನ್ನೊಳು ಭಕ್ತಿ ಮನದೊಳಂತಾಗದಿರಲಿ

# ಬೇಸರು

**ಕಾನಡ**

ಏನಯ್ಯ ಈ ಬೇಸರು ಮನದೊಳು
ಏನಿನಿತು ಬೇಸರುವುದು

ಸೋರಲಾರಂಭಿಸಿ ಆಗಸ ನಡುವಗಲು
ಕಾರುತಲೆ ಇಹುದು ಇನ್ನೂ ನಿಲ್ಲದೆ
ತೀರತಣುವಾಗಿಹುದು ಬೀಸಿ ಬರುತಿಹ ಗಾಳಿ
ನೀರು ನಿಂತಿಹುದು ದಾರಿಗಳೊಳೆಲ್ಲ

ಮರಗಳೆಲ್ಲವು ಹಕ್ಕಿ ಉಳಿಯೆ ಬರಿದಾಗಿಹವು
ಮೊರೆಯುತಿದೆ ಪೆಣ್ಗೆ ತೋಪಿನ ಪಾರಿವ
ಗರಿನೆನೆದ ಕಾಗೆ ಗೂಡಿಗೆ ಹೋಗುತೀ ಮರದಿ
ಕರೆಯುತಿದೆ ಜತೆಯವರ ಕೊರೆದನಿಯಲಿ

ಬೇಸರೆನ್ನಯ ಮನವ ಹಿಡಿದಿಹುದು ಬಲೆಗಳನು
ಬೀಸಿ ಹಕ್ಕಿಯ ಹಿಡಿವ ಬೇಡನೆಂಬಂತೆ
ಆಸೆಯುಳಿದಾಲಿನೆಡೆ ಗರಿಯ ಬಡಿವುದ ನಿಲಿಸಿ
ಘಾಸಿಯೇತಕೆ ಎಂದ ಹಕ್ಕಿಯಂತಿದೆ ಜೀವ

# ಅಲಸಿಕೆ

**ಜಂಜೂಟ**

ಒಲ್ಲೆನಾವ ಕೆಲಸವನೂ ಎಂದಿಹುದಿಂದೆನ್ನ ಮನವು
ಎಲ್ಲವನೂ ಉಳಿದು ಸುಮ್ಮನಿರುವೆನೆಂಬುದು

ಅನುದಿನದೊಳು ಇಹ ಕೆಲಸವು ಇಹುದಿಂದೂ ದಿನದಿನವೂ
ಅನುರಾಗದಿನೆಲ್ಲದರೊಳು ತೊಡಗುತೆ ಇರ್ದ
ಮನವಿದಿಂದು ತಾನೇನನು ಒಲ್ಲೆನೆಂದು ನಿಂದಿಹುದು
ಅನುಕವೇನೊ ಅರಿಯೆ ನಾನು ಎಳಸುವುದೇನನೊ ಮನವು

ಮೂರುದಿನಗಳಿಂದೆ ಮಳೆಯ ಸುರಿಸಿ ಇಂದು ಸೋತಿಹ ಈ
ನೀರದಗಳು ಆಗಸದಲಿ ತಾರಾಡಿರೆ ಭಾನು
ತೋರುತಿಹನು ಸೌಮ್ಯನಾಗಿ ಒಮ್ಮೆ ಒಮ್ಮೆ ತಂಬೆಲರು
ಸಾರುತಿಹುದು ಸುಖದ ಸೊಂಪ ಮೆಲು ನಡೆಯಲಿ ದೂರದಿಂದೆ

ಹರಿ ರಾಧೆಯು ಸರಸದಿಂದೆ ಹರಿದೋಡಿಸುತಿಹನೆನೆ ಈ
ನೆರಳು ಬಿಸಿಲನೋಡಿಸುತಿದೆ ಸಿಲುಕದೆ ಇರಲು
ಅರಿದೆನ್ನುತೆ ತರುಣಿತಿರುಗಿ ಹರಿಯನೆ ಅಪ್ಪಿದಳೆಂದೆನೆ
ಹರಡಿತೊಮ್ಮೆ ಬೆಳಕು ನೆರಳು ಮರೆಯಲುಃ ನಿಮಿಷಕೆ ತಾ

ಅರೆಯರಿಯದ ಮರೆಯ ಸುಖವನಾವುದನಿಂದಾಶಿಸಿ ಕುಡಿ
ಹರಿವುದೊ ಮನ ಅರಿಯೆ ನಾನು ದೊರೆ ನೀ ಪ್ರೇಮ
ಭರದೊಳೆನ್ನ ಹಿಡಿದೌಂಕಲು ತಡೆದುದುಸಿರು ಎಂಬಂತಿದೆ
ಅರಿಯೆನಃ ಹರಿ ಈ ಅಲಸಿಕೆ ಏತಕೆ ಬಂದುದೊ ಇಂದು

# ಹೂವರಸೆ

### ಕಾಂಭೋಜಿ

ಆವಗಾನವಿದೆಂದು ಅಂದೆಂದ ತೆರದೊಳು
ಆವ ಹೂವಿದು ಎಂದು ಇಂದೆಂದೆನು

ಶ್ರಾವಣವು ಕಳೆದೀಗ ನಾಲ್ಕು ದಿನವಾಗಿರಲು
ತೀವಿ ಹಸುರಿಂದೆಸೆಯುತಿರಲು ತಿರೆಯು
ದೇವ ನಾನಿತ್ತಬರುತೀ ಹೂವ ಕಂಡವನು
ಆವ ಹೂವಿದು ಎಂದು ಅರಿಯದಿಹೆನು

ಬಂಗಾರವನು ಪುಟಕೆ ಹಾಕಿ ಊದಿಸೆ ಬರುವ
ರಂಗಿನೊಂದತಿಶಯದ ಶೋಭೆಯಿಂದ
ಶೃಂಗಾರವಾಗಿ ಕಣ್ಣಿಗೆ ಕೌತುಕವ ಕೊಡುವ
ಪಾಂಗಿನಲಿ ಮೆರೆಯುತಿಹುದೀ ಹೂವಿದು

ಆವ ಹೂವೆಂದು ಬಳಿಯಲಿ ಹೋಗಿ ನೋಡುವೆನೆ
ದೇವ ನಿನ್ನಯ ಸೃಷ್ಟಿಯೊಂದು ಸೊಬಗು
ಆವತೆರನಲ್ಪತಾಣದಲು ಕಾಣಲುಬಹುದು
ಹೂವರಸೆಯಲೆ ಕಣ್ಣ ಕೊಂಡುದಿಂತು

# ಬಳಕೆ

**ಕಾಂಭೋಜಿ**

ಏನಾಗಲೆಳಸು‌ತಿಹೆ ಜೀವ
ಏನಾಗಲೆಳಸುತಿಹೆ ಆರಯುಸಿನೋಡು

ಅಲ್ಪ ಯೋಚನೆಗಳನು ಮಾಡಿ ಸಂತತ ಮನಕೆ
ಅಲ್ಪವೆಂದೆನಿಪ ವಕ್ರದಗತಿಯ ಕಲಿಸೆ
ಕಲ್ಪಾಂತರದ ಕೊನೆಯುವರಗೆ ಬರಬರುತ ಅ
ತ್ಯಲ್ಪವಾಗುತೆ ವಕ್ರಸಾರವಹೆ ನೀ

ವಿಷಯವಾವುದು ಹಿಡಿದೊಡೆಯು ವಿಷವನೆಣಿಸುತೆ
ವಿಷಮ ಯೋಚನೆಯನೇ ಮಾಡುತಿರಲು
ವಿಷಬಿಂದು ವ್ಯೆವೆತ್ತು ಹುಳು ಹಾವು ಅಪ್ಪಂತೆ
ವಿಷದ ಯೋಚನೆಯ ಆಶ್ರಯವಪ್ಪೆ ನೀ

ಮಲವ ಕಳೆ ಮನದಿಂದ ಜೀವ ಸುನಿ
ರ್ಮಲವಾಗುತಿರಲು ದೃಢಯತ್ನದಿಂದೆ
ಲಲಿತವಹುದಾತ್ಮ ಹೂವಂದದಲಿ ಅರಳಾಗಿ
ಮಲರವೊಕ್ಕುಳನೊಳಗೆ ಲೀನವಹುದು

## ಹೆಮ್ಮೆ

### ಶ್ರೀರಾಗ

ನಾನು ಎನ್ನುವುದು ಕತ್ತಲನೆಸಗದಂತೆ
ನೀನೊಳಗ ಬೆಳಗು ಚಿದ್ರೂಪಾ

ಜಂಭವನು ಬಿಡು ಎಂದು ಗೆಳೆಯ ಹೇಳಿದರೆ ಮನ
ಮುಂಬರಿದು ಜಂಬವೆಲ್ಲಿಯದೆನ್ನಲಿ
ಎಂಬದೈಯಾ ನಾನು ಕಾಣೆನೇ ಎಂದೆಂಬ
ಜಂಭವನು ಬರಸೆಳೆದು ಅಪ್ಪಿಹಿಡಿದು

ಕೆಲಸ ನಿನ್ನದು ಎಲ್ಲ ಎಲ್ಲವನು ನೀ ಮಾಳ್ಪೆ
ಫಲವು ನಿನ್ನದು ಎಂದು ಬಲ್ಲೆ ನಾನು
ತಿಳಿದಿಹುದ ಜನ ತಿಳಿಸಿ ನುಡಿಯೆ ಕೋಪಿಪೆನಯ್ಯ
ಕಳಚು ಈ ದುರಭಿಮಾನವನು ಮನದಿಂದ

ಬುದ್ಧಿ ತಿಳಿದಿಹ ದಿಟವ ಆತ್ಮ ಆಂತರ್ಯದಲಿ
ಸಿದ್ಧಿಗೊಳಿಸದೆ ಇಹುದು ದೇವ ದೇವ
ಮೊದ್ದುತನವಿದ ಹರಿಸು ಅರಿತರಿವು ಚೇತನವ
ಶುದ್ಧಾಂಗವಾಗಿ ಬೆಳಗುವವೊಲೆಸಗು

ಮುಕ್ತಿ ಕವಿದಿಹುದು ನಾನೆಂಬ ಅಭಿಮಾನವಿದು
ಇತ್ತಲಿಂದಟ್ಟದೊಡೆ ಅತ್ತ ಹರಿದು
ಎತ್ತಲಾದರು ಜೀವದೊಳೆ ಇರುವೆನೆನ್ನುವುದು
ಒತ್ತು ಈ ಮೌಢ್ಯವನು ಉಸಿರಾಚೆಗೆ

# ಹಿರಿಯುದು

**ಕಾಂಭೋಜಿ**

ಹಿರಿದ ನೋಡಿದೊಡೆ ಅರಿಯುವ ದೃಷ್ಟಿಶಕ್ತಿಯನು
ಹರಿಯೆನಗೆ ನೀಡು ನಿನ್ನನು ಅರಿವರೆ

ಆಗಸದ ದುರ್ಗವುದ ಮೇರೆಯನು ಮೀರಿರುವ
ಸಾಗರವ ಅದು ನೆಲವ ಸೋಂಕುವೆಡೆ ನೋಡೆ
ಸಾಗರವೆ ಇದು ನಮ್ಮ ಊರಕೆರೆ ಸ್ವಲ್ಪ ಹಿರಿ
ದಾಗೆ ಇದರಂತೆ ಆಗದೆ ಎನಿಪುದು
ಊರಕೆರೆಯಿಂದ ಸಾಗರ ಎನಿಸುವೀಹದನು
ಬೇರೆಯಾಗಿಹುದು ಆರಯಿಸಿ ನೋಡೆ
ನೀರು ನೆಲವನು ಹಿಡಿದ ತೀರದೆಡೆಯಿಂದಲ್ಲ
ದೂರದಾಂತರ್ಯದಾ ಭರದಿನಲ್ತೇ

ಹಿರಿಯರೆಂದೆನಿಸುವರು ದಿನದಂತೆ ಇರುವುದರ
ತೆರವ ನೋಡುತೆ ಇವರು ಹಿರಿಯರೇನು
ಇರುವರೆಮ್ಮಂತೆಯೆನ್ನುತೆ ಮನದೆ ಕಿರಿದೆನಿಸಿ
ಅರಿಯದಿಹುದಯ್ಯ ಮನ ಹಿರಿಯತನವ
ಆರಯಿಸೆ ಹಿರಿದು ಹಿರಿದೆನಿಸುವುದು ದಿನದಿನವು
ತೋರುವಾ ಸಾಮಾನ್ಯ ಚರಿಯೊಳಲ್ಲ
ದೂರದಾಂತರ್ಯದಾಳವತುಳಿದ ಜೀವನದ
ಭಾರದಿಂದಲ್ತೆ ಇದನರಿಯೆ ನಾನು

# ವಾಮನ

### ತೋಡಿ

ಅರಿಯದೊಲು ಬಾರಯ್ಯ ಮನ ತನ್ನ ನಿನ್ನೊಳಗೆ
ಮರೆವುದನು ಕಲಿವ ಮುನ್ನ

ಮೊದ ಮೊದಲು ಬರು/ವಂದು ಮೆದುಗಮನದಲಿ ಬಂದು
ಎದೆವುಗುವ ಸೊಬಗಿಂದೆ ಇನಿದನಿಯ ನಗೆಯಿಂದೆ
ಎದುರಿನಲಿ ನಿಂದಿರುತೆ ಎದೆಯ ಕುಂದಿಸದಂತೆ
ಮೊದಲು ಸ್ವಲ್ಪವನು ಕೇಳು ಹರಿಯೇ
ಮೊದಲು ಸ್ವಲ್ಪವನು ಕೇಳು

ಮೊದಲು ಸ್ವಲ್ಪವ ಕೊಡಲು ಮನವು ತಾನೊಪ್ಪುವುದು
ಅದನು ಸ್ವೀಕರಿಸಿ ಹಿರಿದಾಗು ಅಲ್ಲಿಯೆ ದೊರೆಯೆ
ಹೃದಯದಾಗಸವನೆಲ್ಲವ ನೀನೆ ತುಂಬು ದೊರೆ
ಇದಕೆ ಮನ ಒಪ್ಪ ಬಹುದು ಹರಿಯೇ
ಇದಕೆ ಮನ ಒಪ್ಪಬಹುದು

ಒಮ್ಮೆಯೇ ಹಿರಿದಾಗಿ ಬಂದು ಎಲ್ಲವನೆನಗೆ
ಸುಮ್ಮನೆಯೆ ಕೊಡು ಎನಲು ಹೆದರಿ ಮನ ಚೆದರುವುದು
ತಮ್ಮ ನೀನಾರು ಇರು ತುಸ ಎಂದು ತಡೆಯುವುದು
ನೆಮ್ಮಲಾರದು ನಿನ್ನನು ಹರಿಯೇ
ನೆಮ್ಮಲಾರದು ನಿನ್ನನು

# ಬೇಡಿಕೆ

## ಮೋಹನ

ಜೀವನವಿದ ಸ್ವೀಕರಿಸೈ
ದೇವ ದಿನದಿನವ ನಿನ್ನದೆಂದೆನಿಸಿ

ಸಲಿಗೆಯೊಳಿಲ್ಲಾ ದಿನವನೆನ್ನೊಡನೆ
ಕಳೆಯಲಾಗದೊಡೆ ಕಾರ್ಯವಿಹುದರಿಂ
ಕೆಲಕೆ ಬಂದು ಕ್ಷಣನಿಂದು ನಡೆಯೈ
ಜಲಜನಯನ ಇದನಾದರು ಸಲಿಸೈ

ಮನೆಗೆ ಬರಲು ಮನ ಇಲ್ಲವಾದೊಡೆ
ಎನಗೆ ಕೇಳ್ವವೊಲು ದೂರದಿಂದಲೇ
ಕನಿಕರಿಸೊಂದೇ ಸ್ವರವನು ಕೊಳಲಿಂ
ನೆನೆಯುತ್ತೆ ಅದನು ದಿನವನು ಕಳೆವೆನು.

ಇಂತಾದರು ಎಂತಾದರು ನಿನ್ನಯ
ಚಿಂತೆಯಿಂದೆ ಇರವೆಲ್ಲವ ಸೋಕಿ
ಸಂತತ ನಿನ್ನೊಳು ಬಾಳ್ವವೊಲೆಸಗಿ
ಅಂತರಾತ್ಮ ಎನ್ನ ನಿನ್ನವನೆನಿಸೈ

# ಗುಟ್ಟು

ಯದುಕುಲ ಕಾಂಭೋಜಿ

ಎಲ್ಲರೊಡನಿರುವಾಗ ಎಲ್ಲರಂತಿರುತಿರ್ದು
ಫುಲ್ಲಲೋಚನ ಮನದೆ ಪ್ರೇಮವಿರಲಿ

ಸಲಿಗೆ ಇಹುದೆಂದೆನಲು ಕೇಳಿ ಕರುಬುತೆ ಮನದಿ
ಕೆಲಬರೆನ್ನುವರು ಇವ ನಿತ್ಯ ಸೊರಿ
ಹಲವರೆಮ್ಮನು ಉಳಿದು ಬಲುಮೆಯ ನಮ್ಮೊಡೆಯ
ಹುಲು ಮಾನಿಸನ ಇವನ ಮೆಚ್ಚನೆಂದು

ಇನ್ನು ಕೆಲಬರು, ಮರುಳಿ ದೊರೆಯ ಮನದೊಳು ಅಂತು
ನಿನ್ನ ಕಂಡರೆ ಪ್ರೇಮವಿಹುದಾದೊಡೆ
ಸನ್ನೆಯನು ಮಾಡು ನೋಡುವ ಎಂದು ಹೇಳುವರು
ಉನ್ನತನು ದೊರೆ ನೀನು ಕುನ್ನಿಯೆನ್ನುವರು

# ಹಂಬಲು

ಮೋಹನ

ಅರೆಯಲಿ ಬಿಡುವೆಯು ತೊಡಗಿದ ಕಾರ್ಯವ
ಪರಿಪೂರ್ಣ ಮಾಡೋ ಶ್ರೀಹರಿ
ಪರಿಪೂರ್ಣ ಮಾಡೋ

ಮುನ್ನದಿನದಿ ನಾ ಪುಗುವಾಗಿರುವಂದು
ಇನ್ನೂ ಅರಿಯದಿರಲೂ ಏ
ನನ್ನೂ ಅರಿಯದಿರಲೂ
ಚೆನ್ನ ನೀನು ಬಂದು ಎನ್ನೊಡನಾಡುತೆ
ನಿನ್ನ ಸೊಬಗ ತೋರಿದೆ ಎನ್ನ
ನಿನ್ನವಳನು ಮಾಡಿದೆ ಅರೆಯಲಿ

ಹರೆಯವು ತಂದುದು ಅರಿವಿನ ಪ್ರೇಮದ
ಅರಿದಾದ ಬೇನೆಯನು ಹರಿ
ತರಲಿಲ್ಲ ಅದು ನಿನ್ನನು
ಮರುಳೆ ಬಾರನು ಹರಿ ಎಂಬರು ಸಖಿಯರು
ಕಿರಿಯಳು ನಾನೆಂಬರು ಆಸೆ
ಹಿರಿದು ಎಂದೆಣಿಸರು ಅರೆಯಲಿ

ಮೌನದ ಕಣ್ಣ ವಿಲಾಸದ ಹಾಸದಿ
ನಾನು ಬರುವೆನೆಂದೇ ಹರಿ
ನೀನದ ಮರೆಯುವುದೇ
ದಾನವ ಮರೆಯದೆ ಬಾರೊ ಬಾರದಿರೆ
ಮಾನ ಉಳಿವುದೇನೋ ನಿನ್ನ
ಮಾನ ಉಳಿವುದೇನೋ ಅರೆಯಲಿ

ಎನ್ನನರಿಯದೆ ಬಂದು ಎನ್ನ ಮನವನು ಪೊಕ್ಕು
ಎನ್ನ ನಿನ್ನವಳನು ಮಾಡಿದೇ ಹರಿ
ನಿನ್ನವಳನು ಮಾಡಿದೇ
ಚೆನ್ನಾ ಹಿಡಿದು ಅಂದು ಇಂದು ಬಿಡುವೊಡೆ
ಗನ್ನಗತಕವಾಗದೆ ಹರಿ
ಅನ್ಯಾಯವಾಗದೇ ಅರೆಯಲಿ

# ವಿವರಣೆ

## ಜಂಜೂಟಿ

ನಾನೆನ್ನ ಮರೆತ ಸಮಯದಿ ಏನನೆಂದರೂ
ನೀನೆನ್ನ ಬಿಡಬಾರದು

ಒಂದು ಸಮಯದಿ ಮನವು ಸೋತು ಎಡೆಬಿಡದಿಂತು
ಕಂದಿಸುವುದೇಕೆನ್ನ ನೆನ್ನಬಹುದು
ಒಂದು ತಾಸಾದರೂ ಬಿಡಬಾರದೇತಕೆ
ಎಂದು ಮುಳಿದಿರುವಂತೆ ಕಾಣಬಹುದು

ಪೋರು ಮಾಡುವ ಅಣುಗನನು ತಾಯಿ ಒಂದು ಸಲ
ಚೀರುತಿಹೆ ಏಕೆಂದು ಗದರಬಹುದು
ಸಾರಿ ದೂರವನವನು ಕಣ್ಗೆ ಕಾಣಿಸದಿರೆ
ತಾರಾಡಿ ಅರಸಿ ಅಳಲುವಳು ತಾಯಿ

ಪೀಡಿಸುವ ಪ್ರಿಯನ ಪ್ರೇಯಸಿ ಮುಳಿದು ಒಮ್ಮೊಮ್ಮೆ
ಕಾಡಿಸುವುದೇಕೆ ಎಡೆಬಿಡದೆ ಎನಲು
ನೋಡಿ ಮಾಡುತೆ ಓಡಿ ಪೋಪುದವನೊಳು ಸರಿಯೆ
ಬೇಡುವೆನೊ ನೀನಿಂತು ಗೆಯ್ಯಬೇಡ

ಅಳಲಿದರು ಬಳಲಿದರು ಬಸವಳಿದು ಬಾಡಿದರು
ಮುಳಿದು ಮಾಣೆಂದು ಇನ್ನೇನೆಂದರೂ
ಉಳಿಯಬೇಡವೊ ಎನ್ನ ಉಳಿದೊಡೆಯು ಕರೆದೊಡನೆ
ಬಳಿಗೆ ಬರುವಂತೆ ಬದಿಯಲೆ ನಿಂದಿರು

# ಕನಿಕರ

## ಮಧ್ಯಮಾವತಿ

ಎಲ್ಲಿ ದಾರಿತಪ್ಪಿ ಎಲ್ಲಿ ಬಂದೆ ಕೃಷ್ಣ
ಎಲ್ಲ ಊರನುಳಿದು ಇಲ್ಲಿಗೇಕೆ ಬಂದೆ

ಗೋಪಿಯರು ಇಲ್ಲಿ ಎತ್ತಿಕೊಳ್ಳುತಿಲ್ಲ
ಗೋಪಾಲರಿಲ್ಲಿ ಜೊತೆಯಾಡಲಿಲ್ಲ
ತಾಪಸರು ಬಂದು ಪೂಜಿಸಲು ಇಲ್ಲ
ಗೋಪಾಲ ಬಾಲ ಇಲ್ಲಿಗೇಕೆ ಬಂದೆ

ಆಲಯವು ನೀರಲಿ ಮುಳುಗೆ ಗೋ
ಪಾಲನೀನಿಂತು ಬಯಲಲ್ಲಿ ನಿಂದೆ
ಬಾಲಕೃಷ್ಣ ಇದ ನೋಡಿಯು ಎನ್ನ
ಆಲಿಗಳು ಎಂತು ಸಹಿಸಿಕೊಂಡಿಹವು

ಕೋಪದಿಂದೆ ನೀ ಕೆರಳಿ ನೋಡುವರೆ
ಶಾಪಕಂಜುವೆವು ಭಕ್ತಿ ತೋರುವೆವು
ಕೋಪಕಂಜುವರು ಹಾಸಕಂಜುವೆವೆ
ಗೋಪಾಲ ನೀ ನಗು ನಗುತ ನಗುತ

# ಮೂರ್ಖ

ನಾದನಾಮಕ್ರಿಯೆ

ಮೂರ್ಖ ಮಾಡಬೇಡ ಮನುಜ
ಮೂರ್ಖ ಮಾಡಬೇಡ

ಹೆಂಡಿರನುಳಿದವ ದಂಪತಿಯೆಂತೊ
ಮುಂಡವನುಳಿದರೆ ದೇಹವಿದೇಕೊ
ಷಂಡನಾಗಿ ಮಕ್ಕಳ ಹೆರುವರೆ ಬ್ರ
ಹ್ಮಾಂಡವ ನೋಡದೆ ದೇಹವ ಕಾಣ್ಬರೆ ?

ಅರಿವರಿವೆನುತಲಿ ಅರಿವಿಲಿ ತನದಲಿ
ಮರುಗಿಸಿ ಮನವ ಕಣ್ಣಿನ ಎವೆಗಳು
ತೆರೆಯಲಿಕಿರುವುದ ಮರೆಯುತೆ ಮುಚ್ಚಿ
ಹರಿಯನು ಇರವಿನ ಹೊರಗೇ ಬಿಡುವೆಯ ?

ಇಲ್ಲಿಯ ಕರಣದ ನೆರವನು ಇಲ್ಲಿ
ಒಲ್ಲೆನು ಎನ್ನುವೆ ಇಂತೇ ಅಲ್ಲಿ
ಅಲ್ಲಿಯ ಕರಣವನೊಲ್ಲೆನು ಎನ್ನುವೆ
ಎಲ್ಲಿಯು ಇಂತೇ ಎಲ್ಲವ ತೊರೆಯುವೆ

# ಅಕ್ಷಯ ವಸ್ತ್ರ

ದೇವಗಾಂಧಾರಿ

ಅಕ್ಷಯಾಭಯುವ ಮಾಯಾ ವನಿತೆಗೆ
ರಕ್ಷಕನಿತ್ತಿರುವಂತಿಹುದು

ದುಷ್ಟಜೀವಿ ದುಶ್ಶ್ಯಾಸನನಂದು
ಧೃಷ್ಟತನದಿ ದ್ರೌಪದಿಯ ಸೀರೆಯನು
ಅಷ್ಟು ಹೊತ್ತು ಎಳೆದೆಳೆದು ಹಾಕಿ ಬಹು
ಕಷ್ಟದಿಂದ ಕೈಸೋತು ನಿಂತಿರಲು
ನೂರು ನೂರು ಎಳೆದಷ್ಟು ಸೀರೆ
ತೋರವಾಗಿ ಗಿರಿಯಂತೆ ತೋರುತಿರೆ
ನಾರೀಮಣಿ ತಾನೆಂದಿನಂತೆಯೆ
ಸೀರೆ ಸಹಿತ ಮಾನದೊಳುಳಿದಂತೆ

ಸೃಷ್ಟಿಯ ಪರಿಯನು ಅರಿಯುವ ಎಂದು
ಎಷ್ಟು ಮಂದಿ ವಿಜ್ಞಾನ ಶಾಸ್ತ್ರಿಗಳು
ಇಷ್ಟಕೆ ತೋರಿದ ತೆರದಿ ವಸ್ತುಗಳ
ಕಷ್ಟದಿಂದೆ ಪರಿಕಿಸಿ ನೋಡಿರಲು
ನೂರು ಜನರ ತಿಳಿವಿದು ನೂರ್ನೂರು
ಭಾರದ ಹೊತ್ತಗೆ ಸಾಲನು ತುಂಬಿ
ತೋರ ಆದರೂ ಮುಗಿಯಿತಿಲ್ಲಿಗೆನ
ಲಾರದೆ ಅವರಿಹ ರೀತಿಯ ನೋಡಲು

# ಬಿಂಕ

### ಕಾಂಭೋಜಿ

ಬರಿಯ ಬಿಂಕದ ಮಾತ ಬಡಿವಾರದಲಿ ನಿನ್ನ
ಸರಿಪಡಿಸಿಕೊಳಲು ನೋಡುವೆವು ಹರಿಯೆ

ವೈರಾಗ್ಯವನು ಕುರಿತ ಮಾತ ಮಳೆಯನು ಕರೆದು
ಆರಾಧ್ಯರೆಂದು ಬಿರುದನು ತಳೆದು ಬಾಗಿ
ನೈರಾಶ್ಯ ಸಾಶ್ಯಗಳ ತರ್ಕದಲಿ ಮೈಯ್ಮರೆದು
ಧೀರಾಗ್ರಣಿಗಳಾಗಿ ನಾಲಗೆಯಲಿ

ಸನ್ಯಾಸವೆನ್ನುವೆವು ವಿನ್ಯಾಸಮಾಡುವೆವು
ಕನ್ಯಾಸಮೂಹವೆನೆ ಕಣ್ಣಿಲೆವುದು
ಅನ್ಯಾಯದಲಿ ಮನವ ಬೆಳೆಯಿಸುತೆ ಹರಿ ನಿನಗೆ
ಶೂನ್ಯವನು ಮಾಡಿ ಮೆಚ್ಚಿಪೆವೆಂಬೊಲು

ಎಷ್ಟು ಸೀರೆಯನುಡಲು ನಾಟಕದ ಬಾಲಕನು
ಸೃಷ್ಟಿಯಲಿ ವನಿತೆಯಾಗುವನೆನ್ನದೆ
ಇಷ್ಟು ವೇಷವ ಹಾಕಿ ಅಷ್ಟು ಮಾತನು ಆಡಿ
ಧೃಷ್ಟತನದಲಿ ನಿನ್ನನೊಲಿಸಲೆಳಸಿ

# ಮೋಸ

ನಾದನಾಮಕ್ರಿಯ

ನಾಮ ಹಾಕುವೆನು ಬನ್ನಿರಿ ಎಂದು
ನಾಮದಯ್ಯ ಬಂದ

ನಾಮವ ಥಪ್ಪನೆ ಮೊಗದಲಿ ತೀಡಿ
ಸೋಮಯಾಜಿಯಾ ಮೊಮ್ಮಗ ನಾನು
ಆ ಮೊದಲ್ಯಾಂಡನ ಮರಿಮಗನೆಂದು
ನಾಮ ಹಾಕುವೆನು ಬನ್ನಿರಿ ಎಂದು

ಪೊಂಗಲಚ್ಚೇರ ಮಾಡಿಸೆ ನೀವು
ರಂಗನ ಒಲವನು ಕೊಡಿಸುವೆ ನಾನು
ಶಿಂಗಗೆ ಶಿಪಾರ್ಸ ಮಾಡುವೆನೆಂದು
ಪಂಗನಾಮ ಹಾಕುವೆನೆಂದು

ಕಾಸಯೆನಗೆ ಕೊಡಿ ಸ್ವರ್ಗಕೆ ಹೋಗಿರಿ
ಈಶಗೆ ನಾಕಳುಹಿದೆನೆಂದೆನ್ನಿರಿ
ದಾಸನ್ ಎನ್ನುತೆ ಎದುರಿಗೆ ಬಂದು
ಈಸೀಜೇರನು ಕೊಡುವನು ಸಿಮಗೆ

# ಸೋಣಗ

### ಖರಹರಪ್ರಿಯ

ಮನ್ನಿಪುದು ಅತಿಯಾದ ಈ ಶ್ರದ್ಧೆಯ
ನಿನ್ನ ಊಳಿಗದವನ ಮೂಢ ಭಕ್ತಿಯಿದೆಂದು

ಸತ್ಯಸ್ವರೂಪ ಸತ್ಯವ್ರತನೆ ನಿನ್ನಂಕೆ
ನಿತ್ಯ, ಅದರೊಳು ಸತ್ಯ ಸೌಜನ್ಯವೇ
ನಿತ್ಯ. ಇದನರಿದರಿದು ಎನ್ನ ಮನ ಒಮ್ಮೊಮ್ಮೆ
ಮಿಥ್ಯ ಏತಕೆ ಬದುಕಿತೆಂದೆಂಬುದು

ಸರಿಯಾದುದೆನ್ನುವುದು ಕಷ್ಟದಲಿ ಸಿಲುಕಿರಲು
ಸರಿಯಲ್ಲವೆನ್ನುವುದು ಸುಖದೊಳಿರಲು
ಅರಿತವನು ಪೊರೆವವನು ನೀನಿಹುದ ಮರೆತು ಮನ
ಮರುಗುವುದು ಧರ್ಮರಕ್ಷಣೆ ತನತೆನೆ

ಮನೆಯ ಪಡೆದೊಡೆಯ ಬಾಗಿಲಿನೊಳೇ ಕುಳಿತು ಸು
ಮ್ಮನೆ ಇರಲು ಬರಹೋಗುವರ ನೋಡುತೆ
ಶುನಕ ಆಮನೆ ತನ್ನದೆಂಬಂತೆ ಗೊರ್ರೆಂದು
ಮುನಿವಂತೆ ನಾನು ಜಗದಲಿ ನಡೆದಿರೆ

# ಕೋಗಿಲೆ ಕಾಗೆ

### ಆನಂದಭೈರವಿ

ಅರಿಯೆನು ಹರಿಯೇ ನಿನ್ನ ನಿಯೋಗದ
ಪರಿಯಿದು ಎಂಬುದನು

ಒಳ್ಳಿದಿದನು ನಾ ಮಾಡಲು ತೊಡಗಿದೆ
ಎಲ್ಲಿ ಇವರು ಎನಗಡ್ಡಿ ಬರುವರೋ
ಎಲ್ಲಿ ಎನ್ನ ಈ ಆಸೆಯವರಿಂದೆ
ಸಲ್ಲದೆ ಪೋಪುದೊ ಎಂದು ಅಂಜಿದೆನು

ಒಳ್ಳಿದು ಇದು ನಿನ್ನದು ಎಂಬುದನೂ
ಎಲ್ಲರ ಮನದೊಳು ಸುಳಿಯುತೆ ನೀನು
ಕಲ್ಲೆದೆಗಳನೂ ಕರಗಿಸುವುದನೂ
ಫುಲ್ಲಲೋಚನಾ ಅರಿಯೆನು ನಾನು

ನಿನ್ನದು ಹರಿ ಈ ಒಳ್ಳಿತು ನೀನಿದ
ಎನ್ನೊಳಿಟ್ಟು ಭ್ರಮೆಯಿಂದದ ನಾನು
ಎನ್ನದೆಂದು ಮುದ್ದಿಸುವವೊಲೆಸಗಿಹೆ
ಇನ್ನೆಲ್ಲರನೂ ಇಂತೇತಿದ್ದುವೆ

## ವ್ಯಾಜ

ಮೋಹನ

ಎಂತಾದರೂ ನಾನು ನನ್ನದು ಎನ್ನುವ
ಚಿಂತೆಯು ಎನ್ನನು ಬಿಡದಿಹುದು

ಮನೆಯ ಬೇಡಿದೆನು ಮಕ್ಕಳು ಮರಿಗೆಂದು
ಧನವ ಬೇಡಿದೆನು ನಾ ಬಡಜನಕೆಂದು
ಜನ ಹೊಗಳಲಿ ಎಂದೆ ಬಳಗವು ಮೆಚ್ಚಲು
ಅನಿತಾಸೆಯೂ ಎನ್ನ ಮನದಾಸೆ

ಸಂತಸದಲಿ ಇಡು ಎಂದೆ ತಾಯಿ ತಾ
ಚಿಂತಿಸದಿರಲೆಂದು ದೇಶಕೆ ಎನುತ ದು
ರಂತದಾಸೆಯಿಂದೆ ಕೀರ್ತಿಯ ಬೇಡಿದೆ
ಇಂತೆಲ್ಲ ಬೇಡಿದುದೆನಗಾಗಿ

ಬೇಡಿದೆ ನಾನತಿಮೂಢನು ಅರಿಯದೆ
ಕಾಡುಹೋದ ಕರು ಕರೆವಂತೆ ಅಲೆವಂತೆ
ಬೇಡುವುದೆನ್ನೊಳಗಚ್ಚರಿಯಲ್ಲ ನೀ
ನೀಡುತೆ ನಗುತಿಹುದಚ್ಚರಿಯು

# ಶ್ರಾವಣದ ಕೋಗಿಲೆ

### ಆನಂದಭೈರವಿ

ಹರೆಯುದಲ್ಲಿ ಹರೆಯುದಾಸೆ ಬರುವ ದಿನದೆ ಬೇರೆ ಆಸೆ
ಹರಿ ಎನ್ನೊಳು ಕಾಲ ಕಾಲದಾಸೆಗಳನು ನೀನೆ ತರುವೆ

ವೈಶಾಖದಿ ಕೇಳಿದೆನು ಕೋಗಿಲೆಯಾ ದನಿಯನಂದು
ಆಶಾವಹ್ನಿ ದ್ರವ ಪ್ರವಾಹದಂದ ಹರಿದತೀವ
ಕ್ಲೇಶದ ಅಳಲಿಂದೆ ನೊಳಗಿ ಎಲರನೆಲ್ಲ ತುಂಬಿತದು
ಆಶೆಯ ಕ್ಲೇಶವನು ಎನ್ನ ಮನದೊಳಂತೆ ಮೊಳೆಯಿಸಿತು

ಶ್ರಾವಣವನು ವರುಷ ಹೆರಲು ಕಲಕಂಠನ ಎಳೆಯದನಿಯು
ಜೀವನದಾದಿಯಲಿ ಆಸೆಗಳನು ಕಾಣದಿರುವ ಮಗುವ
ಪಾವನಾತ್ಮ ಎಲ್ಲವನೂ ತಾಯೊಳರಿದು ಕರೆವವೊಲಿದೆ
ಭಾವ ಲಲಿತ, ಸ್ವರ ದೀನ, ಸರಳವಾಗಿ ಸುಳಿಯುತಿದೆ

ಬಾಳ ಮೊದಲು ಜಗವನೆಲ್ಲ ಉಣಲೆಳಸಿದ ತೆರದ ಆಸೆ
ಸೀಳುತೆ ಮನದಾಗಸವನು ಎಲ್ಲೆಡೆಯೊಳು ತುಂಬಿದ್ದುದು
ಕಾಲ ಬರಲು ಎಲ್ಲವನೂ ನಿರ್ನೊವರ್ನನೊಳೆಳಸುವಂಥ
ಚಾಳಿಯ ಮನದೆಳಸ ನೆನಗೆ ಹರಿ ನೀನೇ ನೀಡಿಪೊರೆವೆ

# ಶ್ರಾವಣದ ಸಂಜೆ

## ಮೋಹನ

ಶ್ರಾವಣದೀ ಸಂಜೆಯಂದವನು ನೋಡಲು ಎನ್ನ ಮನಕೆ
ಯಾವುದೆ ದಿನ ಚಂದವೇ ಎನಿಸುತಿರುವುದು

ದೂರದ ಉನ್ನತವೃಕ್ಷದ ಎಲೆತೀವಿದ ತಲೆಯ ಮೇಲೆ
ತೂರಿ ಭೋರ್ಗರೆಯುತ ಮೊರೆವ ಶಬ್ದದಿಂದ ಬರುತಲಿರುವ
ಮಾರುತನಾ ದೇವರ ನಿರ್ಝರಿಣಿ ಇಳಿದು ಭೂಲೋಕಕೆ
ಸಾರಿ ಬರುತಲಿಹುದೊ ಎನಲು ಆಗಸವನು ತುಂಬಿರುವನು

ಬಾಲರೆಲ್ಲ ಸಂತೋಷದ ಅತಿಶಯದಲಿ ಜೇಯೆನ್ನುತೆ
ಕೇಳಿಗಳಲಿ ಕೂಗುತಿರುವ ನಿನದವಿಲ್ಲಿ ಕೇಳುತಿಹುದು
ಸಾಲು ಸಾಲು ಸುಂದರಿಯರ ಉದ್ಯಾನಕೆ ಕರೆದುಯ್ಯುತೆ
ಗಾಲಿಯೊಂದು ದನಿಯಲಿ ಉತ್ಸಾಹದ ರಥ ಸೂಚಿಸುತಿವೆ

ಬರುತಲಿಹನು ಕಾಂತನೆಂದು ಅರಿದಸತಿಯ ನಗುವೊಗದೊಳು
ನೆರೆದ ಅರೆ ನಿರೀಕ್ಷೆ ಅರ್ಧ ಧೈರ್ಯದೊಂದು ತೆರದ ಸೊಬಗ
ಮೆರುಗಿನಂಥ ಮೆರುಗಿನಿಂದೆ ಮೆರೆಯುತಿಹುದು ಸಂಜೆಯೆಲರು
ಬರುವ ಮಳೆಗೆ ದಾರಿಬಿಡುತೆ ತೊಳಗಿ ಮುಳುಗುತಿಹನು ಸೂರ್ಯ

# ಭಾದ್ರಪದ

### ಕಲ್ಯಾಣಿ

ಪೀತಾಂಬರದೊಲು ತಿರೆಯೀ ಹಸುರ ಎಳೆಯ ಪೈರ ಧರಿಸಿ
ಹಾ ತಾಯೆ ಎಂಬ ಜನಕೆ ಆಹಾರವ ತರುತಲಿಹೆನು
ಕಾತರರಾಗದೆ ಇರಿ ಎನ್ನುತ ಧೈರ್ಯ ಹೇಳುತ್ತೈತರುವ
ಮಾತೆ ಪ್ರೇಮದಿಂದ ನೋಡುವಂತೆ ಸೌಮ್ಯವಾಗಿ ಇಹುದು
ಪೀತಾಂಬರದೊಲ

ಧೀರನಾಗಿ ಚಲಿಸುತೆ ಆ ಆಟದ ದಿನ ಕಳೆಯುಲು ಗಂ
ಭೀರನಾಗಿ ಭೇರಿಯಂದ ಒಮ್ಮೆ ಒಮ್ಮೆ ಮೆಲ್ದನಿಯುಲಿ
ಸಾರುತೀ ಪ್ರದೇಶವನೇ ಶಬ್ದ ತಾನದಿಂದೆ ತುಂಬಿ
ಮಾರುತನಖಿಲೇಶ್ವರನಾ ಸ್ತವವ ನುಡಿವ ತೆರ ಇರುವನು
ಧೀರನಾಗಿ

ಕಾಮನಳಿದು ಉದಯಿಸಿದಾ ತಿಂಗಳ ರಾತ್ರಿಯ ಸೊಬಗ
ಆ ಮಧು ಮಾಸದಲಿ ಜಗವ ತೀವಿ ಹರಿದ ಮೋಹದಲೆ
ಕಾಮಿಸಿದರ ಕಣ್ಗೆ ರೂಪವೆತ್ತು ತೋರುತಿಹವೊ ಎನಲು
ವ್ಯಾಮೋಹವ ಕೊಡುತೆಲ್ಲೆಡೆ ಎಳೆಯಜೀವ ಸುಳಿಯುತಿಹುದು
ಕಾಮನಳಿದು ಉದಯಿಸಿದಾ

# ಭಾದ್ರಪದದ ಕೋಗಿಲೆ

ಕಾಪಿ

ಕೂಗುವೆಯಾ ಕೋಗಿಲೆ
ಈಗಳೂ ದನಿಯನೆತ್ತಿ ಕೂಗುವೆಯಾ

ವರ್ಷ ಅರ್ಧ ಮುಗಿಯುತಿರಲು ಮಳೆಯಕಾಲ ಕಳೆದು ತಿರೆ
ಹರ್ಷದಿಂದ ನಗುತಲೀ ಹಸುರಪೈರ ಉ
ತ್ಕರ್ಷದಿಂದೆ ಸೊಗಯಿಸುತಲಿ ತಣಿದತೆರದೆ ಕಾಣುತಿರಲು
ವರ್ಷಾದಿಯ ಆಸೆ ಮತ್ತೆ ಮನದೊಳು ದನಿ ತಳೆಯುವಂತೆ

ಒಮ್ಮೆಮಾತ್ರ ಕೇಳ್ದುದು ದನಿ ಆಲಿಸುತೆ ಅದನು ಇ
ನ್ನೊಮ್ಮೆ ಕೇಳನೋಡೆ ಮರೆದು ಕೇಳದಿಹುದು ಕೋಗಿಲೆ
ನೆಮ್ಮದಿಯನು ಕಂಡ ಹರೆಯ ಕಳೆಯುತಿರಲು ಮತ್ತೆ ಬಯಕೆ
ಚಿಮ್ಮಿ ಮನದೆ ಆಸೆಯ ತಾ ಮೀಟಿದಂತೆ ದನಿಯಮಾಡಿ

ಅರಿದುದಯ್ಯ ವತ್ಸರವಿದು ತನ್ನಿರವಿನ ಫಲವನ್ನು
ಬರುವ ವರುಷ ಅದರ ಫಲಕೆ ಮರುಗಬೇಕು ಅಂದಿಗೆ
ಮರುಗಲದಕೆ ದನಿಯನೀಡೆ ಬಾ ಕೋಗಿಲೆ ಅನ್ನೆವರೆಗೆ
ಕೊರಲ ನಿಲಿಸು ತಣಿದ ಮನಕೆ ಮತ್ತೆ ಅಳಲ ಕಲಿಸದಿರು

# ಪ್ರತ್ಯಾಶೆ

### ಜಂಜೂಟ

ಇದೆ ಕೊಳ್ ಕೊಳಲ ದನೀ ಸಖೀ
ಇದೆ ಕೊಳ್ ಕೊಳಲ ದನೀ

ಮುರಾರಿ ಬಾರನಿಂದೆಂದು ಮನದೊಳು
ನಿರಾಶೆ ಮೊಳೆದು ಹೃದಯವ ಬೀಗಿ
ಕರಿ ಮುಗಿಲು ನಭವ ಕವಿವಂತೆ ಕವಿದು
ವಿರಹದಿ ಆರವೆಯೆಲರನು ಮುರುಗಿಸೆ

ಬಾರನು ಹರಿಯೆಂಬ ಭಯವು ಮನದಿ ವಿಷ
ಏರಿ ಜೀವವನು ಹೀರಿ ಬೆಳೆದು
ಕಾರದಿನದ ಮುಗಿಲೊಡ್ಡಿನ ತೆರದೆ
ಮೀರಿ ಎನ್ನುಸಿರನಾವರಿಸಿರಲು

ಮಳೆಯನು ಗರ್ಭಧಿ ಹಿಡಿದ ಮೋಡವ
ಸೆಳೆದು ಸೀಳಿಬಹ ಸೆಳೆಮಿಂಚಂತೆ
ಬಲಿತು ನಿಂದ ಭಯದೊಡ್ಡನು ಭೇದಿಸಿ
ಕಳೆಯುತೆ ಸಂಜೆಯ ಖೇದವನಿದೆ ಕೊಳ್

# ಲೋಭ

ಖರಹರಪ್ರಿಯ

ಈ ಪರಿಯ ಸೊಬಗಿನ್ನು ಮರೆವುದೇ ಎಂದು ಪರಿ
ತಾಪ ಪಡುತಿಹುದೈಯ ಮನವು

ಹದಿಮೂರು ದಿನದಿಂದ ಮುಗಿಲೊಡ್ಡು ಹಬ್ಬಿರ್ದು
ಎದೆಗುಂದಲೆಲ್ಲೆಡೆಯು ಮಬ್ಬತೀಡಿ
ಉದಯ ಮಧ್ಯಾಹ್ನ ಸಂಜೆಗಳನೇ ಮರೆಸಿರ್ದು
ಉದಯವಿದು ಸೊಗಸಾಗಿ ಬರುತಲಿರಲು

ಮೃದುವಾದ ಬೆಳಗಿಂದೆ ಮೃದುಗಮನದೆಲರಿಂದೆ
ಮೃದುವಾದ ಹಾಸಸ್ಪರ್ಶಗಳಿನೆಂದೆನೆ ಪ್ರಕೃತಿ
ಸದಯಳಾಗಿಹ ಮಾತೆಯಂತಿರಲು ಸೊಗಯಿಸುತ
ಉದಯವಿದು ಸಂತಸವ ನೀಡಿಬರಲು

ಉದಯವಿಂಥದನೆನಿತ ನೋಡಿತೋ ಪ್ರಕೃತಿ
ಮೊದು ಸೊಬಗಿನಿಂದೆನಿತು ಕೋಟಿ ಕೋಟಿ
ಹೃದಯಗಳ ನೀ ನಲಿಸಿ ಮರೆಸಿದೆಯೊ ಮೋಹನಾ
ಇದನಿನಿತು ದಿನವಾದರೂ ಅರಿಯದೆ

# ಕಾರ್ಪಣ್ಯ

## ಕಾಂಭೋಜಿ

ಲೋಭ ಲೇಪಿತ ದೃಷ್ಟಿಯಲಿ ಸೃಷ್ಟಿಯನು ನೋಡಿ
ಕ್ಷೋಭೆಗೊಳ್ಳುವುದಯ್ಯ ಮನವು

ಕ್ಷಿತಿಯ ನೀನೆಸಗಿದಂದಿನ ಮೊದಲು ಇಂದಿಗೆ ಪ್ರ
ಕೃತಿ ಇಂತ ಉದಯವೆನಿತನು ಕಂಡುದೋ
ಮಿತಿಯನೇ ಅರಿಯದಿಹ ನಿನ್ನ ಸೃಷ್ಟಿಯ ಸೊಬಗ
ವಿತರಣೆಗೆ ಪರಿಮಿತಿಯ ಮಾತು ಏಕೆ?

ಆವಿಯನು ನಾಲ್ಕುಸಲ ಎತ್ತಿ ಮಡಕೆ ಕುಡಿಕೆ
ಸಾವಿರವ ತೆಗೆವ ಕುಂಬರ ಸೆಟ್ಟಿಗೆ
ಆವಿಗೊಂದು ಕುಡಿಕೆ ಒಡೆಯೆ ಹೋದುದೇನು?
ದೇವ ನಿನ್ನಯ ಸೃಷ್ಟಿ ಇಂತಿಹುದಲೇ

ಸೃಷ್ಟಿಯ ಸೊಬಗ ನೋಡಿ ಸುಖಿಸುವುದ ನೀಡು ಮನ
ಕಷ್ಟಪಡದಿರಲಿ ಆಸೊಬಗು ಮರೆಯೆ
ಸೃಷ್ಟೀಶ ಸುಖ ನಿನ್ನೊಳಗನಂತವೆಂಬುದು
ಸ್ಪಷ್ಟವಾಗಿರಲಿ ಎಂದೆಂದು ಮನಕೆ

# ಸ್ಯಾತ್

ಅಠಾಣ

ಆಗಬಹುದು, ಒಳ್ಳಿತಾಗಬಹುದು

ನಿನ್ನ ನಾಮವನು ನಾಲಿಗೆ ನುಡಿಯುತಿರಲು
ಇನ್ನು ಮೇಲದು ಮನವ ಮುಟ್ಟಬಹುದು
ಇನ್ನೊಮ್ಮೆ ಹೃದಯವನು ಮುಟ್ಟಿ ಅದು ಬಾಳನ್ನು
ಸನ್ನುತಾ ನಿನ್ನದೆಂದೆನಿಸಬಹುದು

ವೇಷಕಾದರು ನಿನ್ನ ಸೇವಕನು ಎನಿಸುವೆನೆ
ಈಸಾದರೂ ಒಳ್ಳಿದನು ಮಾಡುವೆ
ವೀಸಮಾತ್ರವನೀಗ ನಿನಗೆ ಅರ್ಪಿಸುವೆನೆ
ಆಸೆಯನೆ ಬಿಡುವ ದಿನ ಬರಲಿಬಹುದು

ಸುಮ್ಮನೆಯೆ ನೀ ಆಟಕೆಂದು ಬಳಿಯಲಿ ಕುಳಿತು
ಒಮ್ಮೆ ಕೈಯನು ಹಿಡಿದು ನಗುತೆ ಅಂತೆ
ಒಮ್ಮೆ ಒಮ್ಮೆ ನಮ್ಮ ಮನದೆ ತಾಣವ ಕೊಳುತೆ
ನಿಮ್ಮವರು ಎನಿಸಿ ಎಲ್ಲರನು ಪೊರೆವೆ

# ಹೀನಾಯ

**ಕಾನಡ**

ಏಕೆ ಹಾಡು ಎಂದೆ ಹರಿಯೆ ಎನ್ನ
ಏಕೆ ಹಾಡು ಎಂದೇ

ಸ್ವರವನು ಅರಿಯೇ ತಾಳವನರಿಯೇ
ಸರಿಯಾದ ರಾಗ ಅಲ್ಲದದ ನಾನರಿಯೇ
ಮುರಳೀಧರ ನಿನ್ನ ಗಾನವ ಕೇಳಿ
ಮರುಳನಾದರೆ ಗಾಯಕನಾದೆನೆ

ಬಾಯ ಮುಚ್ಚಿ ಒಬ್ಬರೊಬ್ಬರ ನೋಡುತೆ
ಗಾಯಕರೆಲ್ಲರು ನಸು ನಗುತಿಹರು
ತೋಯಜಾಕ್ಷ ನಾ ಮೂಢನೆಂದರಿತೂ
ನ್ಯಾಯವೆ ನೀ ಎನ್ನ ಪಾಡೆಂದು ಕರೆದುದು

ಸ್ವರವನು ಅರಿಯದೆ ತಾಳವನರಿಯದೆ
ಹರಿ ನಿನ್ನ ಮುಖವನು ನೋಡುತೆ ಪಾಡಿದೆ
ಸರಿಯಾಯಿತೆಂದವರಚ್ಚರಿ ಗೊಂಡರು
ಮುರಹರ ಸುಮ್ಮನೆ ಕೇಳುತಿರ್ದೆ ನೀ

# ಕವನ

ಶಂಕರಾಭರಣ

ಎನ್ನ ಕವನ ಅವನ ಕವನ ಎಂದು ನಾವು ಎಂಬದೆಲ್ಲ
ಸನ್ನುತಾ ನೋಡಲಾಗಿ ನಿನ್ನ ಕವನವೇ

ಎನ್ನ ಮನದೆ ಅವನ ಮನದೆ ಎಲ್ಲ ಮನದೆ ನೀನು ಸುಳಿದು
ನಿನ್ನ ಕೊಳಲನುಡಿಸಲಾಗಿ ಕವನವಪ್ಪುದು
ಎನ್ನದೇನು ಅವನದೇನು ಎಲ್ಲವೂ ನಿನ್ನದೆಂದು
ಚೆನ್ನಕೇಶವಾ ಅರಿವನೆನಗೆ ಕೊಡುವುದು

ವೀಣೆಯೊಂದು ತಂತಿ ಬಹಳ ತಂತಿಗಳಲಿ ಮನೆಯು ಬಹಳ
ವಾಣಿ ಬರುವುದೊಮ್ಮೆಗೊಂದು ಮನೆಯ ಮೀಂಟಲು
ಕೇಣವೇಕೆ ಮನೆಗೆ ಮನೆಗೆ ನಾನು ತಾನು ಎಂಬದಾಗಿ
ಜಾಣರದನು ವೀಣೆ ನುಡಿವುದೆಂದು ಪೇಳ್ವರು

ಎಲ್ಲರೊಳೂ ನೀನೆ ಇರುವೆ ಎಲ್ಲವ ನೀ ವ್ಯಾಪಿಸಿರುವೆ
ಎಲ್ಲ ನಿನ್ನ ಶಕ್ತಿಯಿಂದೆ ನುಡಿದು ನಡೆವುದು
ಹುಲ್ಲಿನಂತೆ ಹಗುರ ನಾವು ಎಲ್ಲ ನೀನೆ ಎಂದು ಅರಿದು
ಎಲ್ಲವ ನಿನ್ನಡಿಯೊಳಿಡಲು ಎನಗೆ ಕಲಿವುದು

# ಗಾಯತ್ರಿ

ಜಿಲಹರಿ

ಬಾ ಸವಿತಾ
ಬಾ ಸವಿತಾ ಬಾ
ಬಾ ಸವಿತಾ

ಕೋಟಿಯೋಜನದ ಬಾನದಾರಿಯ
ದಾಟಿ ಧೀಂಕಿಡುತ ಕಾಪಿಡು ಬಾ
ನೋಟ ಯಾರೆನಗೆ ಬರಲಿ ಎನ್ನುತ
ಬೂಟದಿ ಮುಸಗಿದೆ ಪಾಶವ ತಾ

ಒಳಗಿನ ಕಣ್ಣನು ಮುಚ್ಚಿಸಿ ಒಮ್ಮೆ
ತಿಳಿವಿಗೆ ಬಣ್ಣವ ಹಚ್ಚಿಸಿ ಒಮ್ಮೆ
ಒಳಿತಲ್ಲದದೇ ಒಳಿತೆಂಬ ಅದರ
ಚಳಕವೆಲ್ಲಕೆ ವಿನಾಶವ ತಾ

ನೆಲೆಯಿಂದ ಹೊರಟು ಅಲೆ ಅಲೆ ಅಲೆ ಅಲೆ
ಚಲತೊಟ್ಟ ಮಲ್ಲವಾಹಿನಿ ಬಾ
ನಿಲವಿಲ್ಲ ಜಗದಿ ಕತ್ತಲಿಗೆಂದು
ಗೆಲವನು ಸಾರುವ ಭಾಸವ ತಾ

ಕೊಂಕು ಕುಟಿಲಕುಹಕದ ಎಲ್ಲಾ ಎಡ
ವಂಕದ ಯೋಚನೆ ನುಡಿನಡೆಯ
ಬಿಂಕವ ಬಯಲಿಗೆಳೆದು ಸತ್ಯದ ನಿ
ಶ್ಯಂಕ ಮುಖಾಬ್ಜಕೆ ಹಾಸವ ತಾ

ಓಂ ತತ್ಸವಿತುರ್ವರೇಣ್ಯವೆಂಬೆವು
ಅಂತಲ್ಲದೆ ಬೇರೆಯದನು ನಂಬೆವು
ಪಂಥವ ಬೆಳಗಿ ನಿರೂಪಿಸು ಕಾಂಬೆವು
ಶಾಂತ ಸುಂದರ ಶಿವದ ಆ ಸವಿ ತಾ

# ತಾರಕ

## ಮಧ್ಯಮಾವತಿ

ರಾಮ ರಾಮಾ ಕಲ್ಲಲಿ ನಿನ್ನ
ನಾಮವ ಗುರುತಿಸಿ ನೀರಲಿ ಬಿಡಲು
ಆ ಮಹಾಂಬುಧಿಗೆ ಸೇತುವೆಯಾಯ್ತು ಮ
ಹಾಮಹಿಮಾ ಸುಗುಣಾಭಿರಾಮಾ
ರಾಮ ರಾಮಾ

ಕಲ್ಲಾಗಿದೆ ಮನ; ಭವದಲಿ ತೇಲಲು
ಬಲ್ಲೆನೆಂತೊ? ಇದರಲಿ ತವನಾಮ
ನಿಲ್ಲುವಂತೆ ಕೊರೆ; ಕೊರೆಯಲಾಗದೆನೆ
ಮೆಲ್ಲನೆ ಗುರುತಿಸಿ ರಕ್ಷಿಸು, ರಾಮಾ
ರಾಮ ರಾಮಾ

ಎದೆ ಕಲ್ ಇದಕೂ ತಗದೆನೆ, ಓ ನಿರ
ವಧಿಕ ಕೃಪಾಶ್ರಯ, ರಾಮ ರಾಮ
ಬದುಕನನುಕ್ಷಣ ಕೈಯಲೆ ಹಿಡಿದಿರು
ಇದು ಕಷ್ಟವೆ ಎಲ್ಲೆಡೆ ಇಹ ನಿನಗೆ
ರಾಮ ರಾಮ

# ದೈನ್ಯ

## ಯದುಕುಲಕಾಂಭೋಜಿ

ಸತತವೂ ಜೊತೆಯೊಳಿರು ಜತನದಲಿ ಕಾಯುತಿರು
ನತಜನರ ಕಾವ ಸಿರಿಯರಸ ದೇವಾ

ಬೆಳೆದೇಳೆ ಬಾಳು ಚಂಚಲವಾಗುತಿದೆ ಮನಸು
ಇಳಿಯುತಿದೆ ಧೈರ್ಯ ಭಯದೊಡನಾಡುತಿದೆ ಮನಸು
ಬಳಿಸಾರೆ ಚೆಲುವಳಿವ ಒಣಕಲೆಯ ಚಿತ್ರವೆನೆ
ಕಳೆಗುಂದಿ ಕಾಣುತಿದೆ ಸೊಗದ ಕನಸು

ಎಳೆಯ ದಿನದಾನಂದ ಕಡಿಮೆಯಾಯಿತೆ ಎಂದು
ಕಳವಳಕೆ ಸಿಲುಕಿ ಸೊರಗಿತು ಎನ್ನ ಮನವಂದು
ಜಲವಿಳಿಯುತಿಹ ಬಾಳ ಸೊಗದ ಬಾವಿಯೊಳಿನ್ನು
ತಳವೆ ಕಾಂಬುದೊ ಎಂಬ ಭೀತಿಯಿಂದು

ಸತತ ಮನಸಿನಲಿ ನಿಲು; ಬಾಳಿನಲಿ ಬಹುದೆಲ್ಲ
ಹಿತಕಾಗಿ ನೀ ತೋರ್ಪ ಕರುಣೆಯೆಂಬುದನರಿಸು
ಪ್ರತಿಯಾಗಿ ಭಾವಿಸದ ತೆರದಿ ಜೀವವನಿರಿಸು
ನತಜನದ ನಡೆ ಕಲಿಸು ದಾಸನನು ಪತಿಕರಿಸು

## ಏಕಮೇವ

### ಯದುಕುಲಕಾಂಭೋಜಿ

ನೀ ಕೊಡದ ಸಿರಿಯಿಲ್ಲ ಕೊಡಲು ಬಡತನವಿಲ್ಲ
ಶ್ರೀಕಾಂತ ನೀನಲ್ಲದೆನಗೆ ಗತಿಯಿಲ್ಲ

ತನುವಿತ್ತೆ ನೀನೆ ಈ ಮನವಿತ್ತೆ ನೀನೆ ಜೀ
ವನವಿತ್ತೆ ನೀನೆ ನೀ ಧನವನಿತ್ತೆ
ಜನವೇನು ಎನ್ನ ಬದುಕಲಿಮೆಚ್ಚಿ ಸರಿಯೆಂದ
ಘನದ ಸಿರಿಯೆಲ್ಲವನು ನೀನೆ ಇತ್ತೆ

ನೀ ನೀಡದಿರಲೆನಗೆ ತನುವಿಲ್ಲ ಮನವಿಲ್ಲ
ನೀ ನೀಡದೆನಗೆ ಧನ ಇನಿಸು ಇಲ್ಲ
ದಾನಿ ನೀ ಕನಿಕರಿಸಿ ನೀಡಲಿಲ್ಲವೆ ನನಗೆ
ಏನೊಂದು ಸಿರಿಯಿಲ್ಲ ಹಿರಿಮೆಯಿಲ್ಲ

ತನುವಿಂದ ಮನ ಘನತೆ ಜನದೊಲವು ಧನದಿಂದ
ಘನದ ಸಿರಿ ದೇವ ನಿನ್ನಡಿಯ ಭಕುತಿ
ಕನಿಕರಿಸಿ ಅದ ನೀಡಿದವನು ಇದನೂ ನೀಡು
ಕನಿಕರಿಸದಿಹೆಯ ಗತಿಯಿಲ್ಲ ನನಗೆ

# ತವಾಸ್ಮಿ

## ಯದುಕುಲಕಾಂಭೋಜಿ

ಹಿಡಿವುದಕು ನಿನ್ನದು ಬಿಡುವುದಕು ನಿನ್ನದು
ಒಡೆಯ ಏಗೆಯ್ವುದಕು ಈ ಬಾಳು ನಿನ್ನದು

ನೆನವು ಬಂದುದು ಮೊದಲು ಬಾಳಿನಲಿ ಅನುಗಾಲ
ಅನುದಿನ ಅನುಕ್ಷಣವು ಏನೊ ಶಂಕೆ
ಒಣಗಲರಿಯದ ಒರತೆಯಾಗಿ ಜಿನುಗುತಲಿಹುದು
ಕನವರಿಕೆಯಲಿ ಉಂಬಕಷ್ಟದಂದ

ಎನಿತೊ ಒಳಿತಿರಲು ಅದ ನೆಚ್ಚದಿರುವುದು ಉಸಿರು
ಇನಿಸಾದರೂ ಕೆಡಕನೂಹಿಸುವುದು
ಮನಗೆಡದೆ ತೃಪ್ತಿ ಇಲ್ಲೆಂಬಂತೆ ತನ್ನ ಹೊಣೆ
ತನತೆ ಎಂಬಂತೆ ಚಿಂತೆಯ ಮೆಲುವುದು

ಇನ್ನಿಂತು ನಡೆವುದನು ನಾನೊಲ್ಲೆ ನನ್ನೊಡೆಯ
ಬನ್ನವಿದ ಬಿಡಿಸಿ ಪರಿಪಾಲಿಸೆನ್ನ
ನನ್ನದೆನ್ನುವುದೆನ್ನೊಳಿನಿಸಿಲ್ಲ ಬಾಳೆಲ್ಲ
ನಿನ್ನೊಡವೆ ಇದನಡೆಸು ಇಚ್ಛೆಯಂತೆ

# ಮಾರ್ಜಾಲ ಕಿಶೋರ

ಯದುಕುಲಕಾಂಭೋಜಿ

ನಿನ್ನ ಕೃಪೆ ತಾನಾಗಿ ರಕ್ಷಿಸಲು ಮುಂಬರಿಯೆ
ನನ್ನ ಅರ್ಹತೆಯ ಮಾತೇನು ದೊರೆಯೇ

ನನ್ನ ತಪ್ಪು ಅನಂತ ಕೋಟಿಯಾದರೆ ಏನು
ನಿನ್ನ ಸೈರಣೆಗೆ ಮಿತಿಯಿಲ್ಲ ಎಂದ
ಅಣ್ಣನಾ ನುಡಿ ಇಲ್ಲಿ ನೂರೊಮ್ಮೆ ಸಲ್ಲುವುದು
ಮನ್ನಿಸಿದೆ ಸರಿ ಬೇರೆ ದಾರಿ ಇಲ್ಲ

ಯಾವ ಭಾವದಿ ನನ್ನ ಮಾನವನ ಮಾಡಿದೆಯೊ
ದೇವ ನೀನಿದ ಬಲ್ಲೆ ಮಾಡಿದವನು
ಜೀವವನು ಕೊಟ್ಟಂದೆ ಕಾವ ಭಾರವ ಹೊತ್ತೆ
ಧಾವಿಸುತ ಬಾ ಇದನು ರಕ್ಷಿಸು ಸದಾ

ಅಂತಲ್ಲ ಕೃಪೆಗೆಲ್ಲ ನಾಅರ್ಹ ಅಹುದೆನಲೆ
ಎಂತು ಬಂದಿತು ನನಗೆ ಆ ಅರ್ಹತೆ
ಸ್ವಂತ ಒಂದಿಲ್ಲೆನಗೆ ಅರ್ಹತೆಯೊ ಕರುಣೆಯೊ
ಇಂತೆಂದೊ ಅಂತೆಂದೊ ನೀನೆ ಸಲಹು

# ವಾತ್ಸಲ್ಯ

## ಮಧ್ಯಮಾವತಿ

ನಾನಿನ್ನ ಮರೆತರೂ ನೀನೆನ್ನ ಮರೆಯದಿಹೆ
ಏನು ಕರುಣೆಯೊ ನಿನ್ನದು ರಂಗಯ್ಯ

ಬಣ್ಣ ಬಣ್ಣದ ಆಟದೊಡವೆಗಳ ಮಧ್ಯದಲಿ
ಚಿಣ್ಣ ತಾಯನು ಮರೆತು ನಲಿವ ತೆರದಿ
ನಿನ್ನ ಕೃಪೆ ನೀಡಿದೀ ಬಾಳಸುಖಗಳ ನಡುವೆ
ಎನ್ನ ಮನ ನಿನ್ನನೆನವನೆ ನೀಗಿ ಇಂತು

ಒಳಗೆ ಕುಳಿತಿಹತಾಯಿ ಬಾಲನಿಗೆ ತಾನಿರುವ
ನೆಲೆ ಮರೆಯದಿರಲೆಂದು ಆಗಆಗ
ಒಲುಮೆಯಲಿ ಅಣ್ಣಯ್ಯ ಎಲ್ಲಿಹೆಯೊ ಎಂಬಂತೆ
ಒಳಗೆ ಕುಳಿತನ್ನ ನೀ ಕರೆಯುತಿರುವೆ

ಎನ್ನೊಡೆಯ ಬಾಳಿನಲಿ ಎಲ್ಲಿರಲಿ ಎಂತಿರಲಿ
ನಿನ್ನ ನೆನಪೆನ್ನ ನಡೆಯನು ತಿದ್ದುತ ಅವಿ
ಚ್ಛಿನ್ನವಾಗಿರಿಸಿರಲಿ ನಾ ನಿನ್ನತೆಂಬುದನು
ಚೆನ್ನಕೇಶವ ಇಂತು ರಕ್ಷಿಸೆನ್ನ

# ತಿರುಕ

ಜಂಜೂಟಿ

ಯುಗಕಲ್ಪಾಂತರ ಉರುಳುತಲಿರೆ ನೀ
ನೀಡುತಲಿಹೆ ಬೇಡುತಲಿಹೆನಾ

ಚಿರಕಾಲಕು ನಾ ನಿನ್ನ ಸನ್ನಿಧಿಯ
ತಿರುಕನೆ ಅಲ್ಲದೆ ಉಂಟೆ ಬೇರೆ
ಹರಿ ಕರುಣಾಕರ ನೀ ಎಂದೆಂದೂ
ಮರುಕಗೊಂಡು ನೀಡುವ ದಾತಾರ

ಎಳವೆಯ ದಿನದಲಿ ಅನ್ನವ ತಿರಿದೆನು
ವಾರದೇಳು ದಿನದಲಿ ಮನೆಯೇಳು
ನಿನ್ನೀ ಮನೆಯಲಿ ತಿರಿಯುವೆನಿಂದು
ಎನ್ನದ ಮಾಡಿದೆ ಇದನು ದಯಾಳು

ಅಂದಾ ಮನೆಯವರಾಕೃತಿಯಿಂದೆ
ಅನ್ನವಿಟ್ಟು ಸಾಕಿತು ನಿನ್ನ ದಯ
ಎಂದೂ ಎಲ್ಲೂ ಹೊರೆವನು ನೀನೆ
ಬಿಡದಿರಲೀ ನಂಬುಗೆ ನನ್ನೆದೆಯ

# ಪ್ರಪತ್ತಿ

### ಧನ್ಯಾಸಿ

ಎನ್ನದೆನ್ನುವ ಎಲ್ಲ ಬಯಕೆಯನು ಬಿಟ್ಟು
ನಿನ್ನದಾಗಿಹುದ ಕಲಿಯಲಿ ಜೀವ, ದೇವ

ನೀ ಸ್ವಾಮಿ ನಾ ಸೊತ್ತು; ನೀ ನಿಲಿಸಿದೆಡೆಗೊತ್ತು
ನನಗೆ; ನನ್ನ ಅದೃಷ್ಟ ನಿನ್ನ ತೊತ್ತು;
ಏನು ಎಂತೆಂದು ಯೋಚಿಸಲೇಕೆ; ನಿನ್ನಿಚ್ಛೆ
ನನ್ನ ಭಾಗ್ಯದ ಬೆಳೆಗೆ ನೆಲ ನೀರು ಬಿತ್ತು;

ಹುಲ್ಲಾಗು ಎನೆ ನೀನು ನಾನಾದೆ ಬರಿಹುಲ್ಲು;
ಕಲ್ಲಾಗು ಎಂದಿರಲು ಆದೆ ನಾ ಕಲ್ಲು;
ನಿನ್ನಾಜ್ಞೆ ನಡೆಯುತಿದೆ ಈ ಬಾಳ ಎಲ್ಲೆಡೆಯು;
ಅದನುಳಿದು ಇಲ್ಲ ಬೇರೊಂದು ಸೊಲ್ಲು.

ಏನ ಮಾಡುವರೆ ಸಂಕಲ್ಪಿಸಿರುವೆಯೊ ಮಾಡು;
ಏನಾಯ್ತು ಆಗದು ಅದು ನಿನ್ನ ಪಾಡು;
ಗೆಯ್ಮೆ ನಿನತೆಂಬರಿವು ಒಂದ ಸಂತತ ಕೊಡು;
ನನ್ನ ಗೆಯ್ಮೆಯನದಕೆ ಮಾಡುಮೇಲ್ಜೋಡು.

# ಸಂಗಾತಿ

## ಮಧ್ಯಮಾವತಿ

ನೀನೆನ್ನ ಜೊತೆಯಲೇ ಎಡೆಬಿಡದೆ ನಡೆದುದನು
ನಾನಿನ್ನೆವರಮರಿಯೆನಯ್ಯ

ನಿದ್ದೆಯಲಿ ನಡೆವಂತೆ ಮೆಯ್ಮರೆದು ನಡೆದೆನೋ
ಮೊದ್ದುತನದಲಿ ನಿನ್ನ ಅರಿಯದೋ ಮನವು
ಸದ್ದುಮಾಡದ ನಿನ್ನ ನಯದ ನಡೆಯೋ ಮಾಯೆ
ಹೊದ್ದು ಎನ್ನನು ನಿನ್ನ ಮರೆಗೊಳಿಸಿತೋ

ಮರುಭೂಮಿಯಲಿ ನಾನು ಒರುವನಾದೆನೆ ಎಂದು
ಮರುಮರುಗಿ ಮನದಲೇ ಕರಗಿದೆನು ದೊರೆಯೆ
ಅರಿಯೆನಾ ದಾರಿಯನು ತೋರುವರು ಇಲ್ಲೆಂದೆ
ಅರಿಯೆ ನೀ ಕೈಹಿಡಿದು ನಡೆಯಿಸಿದುದ

ತಿರುಗಿ ನೋಡಲು ಮಳಲಮೇಲೆ ನಾ ನಡೆದಡಿಯ
ಗುರುತಿನೊಡನಿಹುದು ನಿನ್ನಡಿಯ ಗುರುತು
ಹರಿದಾರಿಗಳನು ಕಾಡಿನಲಿ ಬೇಸರಪಡದೆ
ಕರುಣಾಳು ಎನ್ನೊಡನೆ ನಡೆದೆ ನೀನು

# ರಕ್ಷಕ

ಶಾಹನ

ರಕ್ಕೆ ಮುರಿದು ಬಿದ್ದ ಹಕ್ಕಿವೊಲಿದ್ದೆನ್ನ
ಅಕ್ಕರೆ ತೋರಿ ನೀನೇ ಪೊರೆದೆ

ಅಕ್ಕರೆಯಿಂದ ನೀ ನೀಡಿದ್ದೈಸಿರಿಗೆ
ಸೊಕ್ಕಿ ನಾ ಮೆರೆಯೆ ಮರುಗಿದೆ ನೀನು
ಸೊಕ್ಕು ಮುರಿದು ನಾನು ನೆಲಕೆ ಬೀಳೆ ನಿನ್ನ
ತೆಕ್ಕೆಯಲ್ಲಿ ನೀ ಹಿಡಿದೆತ್ತಿದೆ

ಹಿರಿಯರ ನಡೆಯಲಿ ಅರಿತೆನೊ ನಿನ್ನನು
ದೊರೆ ನೀನು ಎಂಬುದನೊಪ್ಪಿದೆನೋ
ಸಿರಿ ಬರೆ ಪರೆ ಬಂದ ಕಣ್ಣಂತೆ ಮನವಿದು
ಮರೆತುದೊ ನಿನ್ನನು ಅರಿಯುವ ಪರಿಯನು

ಮರೆವು ಹೋಗಿ ಮತ್ತೆ ನಿನ್ನ ನೆನೆದ ದಿನ
ಹರಿ ಎನ್ನ ಹಿರಿ ಹಿರಿ ಕಾರ್ಯದಲಿ
ನೆರವಾಗೆ ನೀನಿಹೆ ಎಂದೇ ತಿಳಿದೆನೊ
ದೊರೆ ನೀನು ಎಂಬುದ ಮರೆದೆನೊ ಬಿದ್ದೆನೊ

# ಎಚ್ಚರಿಕೆ

ಬೇಹಾಗ್

ಮರೆಯುವುದು ಬೇಡ ಮನವೇ ಶ್ರೀಹರಿಯ
ಕರುಣೆ ಈ ಬಾಳುವೆಯ ತುಂಬು ತುಂಬಿರುವುದನು

ನೆನೆಯೊ ಈ ಮೊದಲು ನೀನೆನಿತು ಸಲ ಬೆದರಿದೆ
ಎನಿತು ಸಲ ಇಂತು ಅಂತಾಯಿತೆಂದೆ
ಎನಿತು ಸಲ ನೀನು ಅಂಜಿದೆ ನೋಡು ಅನಿತು ಸಲ
ಘನಮಹಿಮ ಕೃಪೆಯಿಂದ ಹೊರೆದನಲ್ತೆ

ಏನ ಮಾಡಿದೆ ನೀನು ಕರುಣೆಯನು ಗಳಿಸುವರೆ
ತಾನೆ ಕರುಣಾಳು ರಕ್ಷಿಸಿದನಲ್ಲಾ
ದೀನನಾಗುವೆ ಯೇಕೆ ದಾನಿ ನೀಡುವನು ತಾ
ದಾನಿಯಾದುದರಿಂದ ಬೇರೆಯಲ್ಲ

ಈ ಮೊದಲು ಹೊರೆದವನು ಹೊರೆಯನೇ ಬಹಕಾಲ
ನೇಮವಲ್ಲವೆ ಹೊರೆವೆನೆಂಬುದವಗೆ
ಸ್ವಾಮಿ ಮರೆವನೆ ತನ್ನ ಸೊತ್ತು ಚಿಂತಿಸಬೇಡ
ಕ್ಷೇಮವನು ನೋಡಿಕೊಳುತಿಹನು ಸತತ

# ಬುದ್ಧಿವಾದ

## ನಾದನಾಮಕ್ರಿಯ

ಬಹು ಚಿಂತೆ ಬೇಡ ಮನುಜಾ ಬದುಕನು
ಕಹಿಮಾಡಿಕೊಳಬೇಡ ಅನುಜಾ

ಹರಿಯೆನಲು ರಾಯರತುನಾ
ಪೊರೆಯೆಂಬುದಾಣಿಮುತ್ತು
ಹರಿಪೊರೆಯೆಂಬುವ ರಕ್ಷೆಯ ಜತನ
ಧರಿಸು ಓಡುವವು ಎಲ್ಲ ಕುತ್ತು

ಬಂದಿತೆಲ್ಲಿಂದ ಬಾಳು
ಚಂದ ಬಾಳುವೆನೆ ಎಂಬಾಸೆ
ಸಂದೇಹ ಬೇಡ ತಮ್ಮಾ ಕೇಳ
ಲ್ಲಿಂದ ಸುರಿಯುತಿದೆ ಹರಕೆಯ ಸೇಸೆ

ನನ ನಿನಗೆ ಬದುಕ ಕೊಟ್ಟು
ಅನುಕ್ಷಣವು ಗಾಸಿಪಟ್ಟು
ನಿನ ನನಗೆ ಮಿಗಿಲು ಮಮತೆಯನಿಟ್ಟು
ತನದೆಂದೆ ಕಾದಿಹನು ಪಣತೊಟ್ಟು

## ನೇತಾ

### ಮೋಹನ

ನೀನೆ ಕೈ ಹಿಡಿದು ನಡೆಯಿಸುತಿರೆ ಇ
ನ್ನೇನು ಚಿಂತೆ ನನಗೆ

ಇಂದು ಇಲ್ಲಿಹೆನು ದಿಟ ಆದರೆ ನಾ
ಬಂದೆನು ಎಲ್ಲಿಂದ
ಅಂದು ಎನ್ನ ಅಲ್ಲಿಂದ ಹೊರಡಿಸಿ
ಒಂದೆ ಸಮನೆ ಈವರೆಗೂ ನಡೆಸಿ
ಕ್ಷಣದಿನ ಪಕ್ಷ ತಿಂಗಳು ವತ್ಸರ
ಎಣಿಸದೆ ಜೊತೆನಡೆಯುತ ನಿರ್ಮತ್ಸರ
ತಂದೆ ತಾಯಿ ಸಖ ಬಂಧು ಆಗಿ ತರಿ
ಸಂದು ಸದಾ ಸಂರಕ್ಷಿಸಿ ದೇವ

ಒಂದೆ ಎರಡೆ ನೀತೋರಿದ ಕರುಣೆ
ಕಂದನೆಂದು ನನಗೆ
ಮಂದ ಬುದ್ಧಿ ಉಸಿರಾಡಲು ಬಲ್ಲೆನೆ
ಎಂದು ನೀನು ಎದೆ ತಿದಿಯನು ಮೆಲ್ಲನೆ
ಆಡಿಸಿ ಒಡಲಲಿ ಪ್ರಾಣವ ಸುಳಿಸಿದೆ
ಜೋಡಿಸಿ ನನ್ನನು ಅದರೊಳು ನಿಲಿಸಿದೆ
ಚಂದದ ಒಳಗಿನ ಹೊರಗಿನ ಕರಣವ
ಸಂದುಗೂಡಿಸಿ ಸಲಹಿದೆ ದೇವ

ಈತೆರ ಬಾಳಿನ ಮೊದಲಲೆ ಇದರ
ಸೂತರ ನೀ ಹಿಡಿದೆ
ಕರುಣೆಯಿಂದ ಇದರೆಡೆಯನು ತುಂಬಿದೆ
ಇರುಕಲಿ ಇಲ್ಲೇ ನನಗೂ ಇಂಬಿದೆ
ಎನ್ನುತ ನಾನೆನ್ನುವ ಈ ಗವಿಯಲಿ
ಸನ್ನುತ ಮನೆ ಮಾಡಿದೆ ನೀ ದಯದಲಿ
ಒಳಗನು ಬೆಳಗಿದೆ ಕತ್ತಲ ಕೆಡಿಸಿದೆ
ಕಳಕಳಿಯಿಂದೆನ್ನಡಿಗಳನಿಡಿಸಿದೆ

## ಕೃಪಾರಸ

### ಮಧ್ಯಮಾವತಿ

ತುಂಬಿತು ಬಾಳನು ನಿನ್ನ ಕೃಪಾರಸ
ಇಂಬನು ತುಂಬಿತು ಮೇಲ್ವರಿ ಹರಿಯಿತು

ಜಡವನು ಚೇತನಮಾಡಿ ಕೃಪಾರಸ
ಒಡಲು ಉಸಿರು ಮನ ಬುದ್ಧಿಯ ಬೆಳೆಸಿತು

ಜೀವಕೆ ದೈವವ ಸವಿಸಿ ಕೃಪಾರಸ
ದೇವ ನಿನ್ನಕಡೆ ತಿರುಗಲು ಕಲಿಸಿತು

ನಿನ್ನನಾ ಬಯಸಿದೊಡನೆ ಕೃಪಾರಸ
ನನ್ನಬಳಿಗೆ ನಿನ್ನಡಿಯನು ತಂದಿತು

ಎದುರಲಿ ನಿನ್ನನು ನಿಲಿಸಿ ಕೃಪಾರಸ
ಸದಯ ಹಸ್ತದಲಿ ಕರೆಸಿತು ಹೊರೆಸಿತು

# ಅರ್ಪಣ

## ಶಂಕರಾಭರಣ

ನೀನೇ ಗತಿ ನೀನೆದಾರಿ ನೀನೇ ಗಮನದ ಕೊನೆಯು
ನೀನೇ ಗಮನದ ಮೊದಲು ನೀನೇ ಗಮನೋದ್ಯಮಿಯು
ನೀನೇ ಗಮನದೊಳೆಲ್ಲವ ಪ್ರೇರಿಸಿದಾ ಆದಿ ಚೇತನ
ನೀನೇ ಸರ್ವವು ಎಂಬುದನರಿಯಲಿ ಈ ಆತ್ಮ ಹರಿಯೆ

ನೀನೇ ಈ ಅಖಿಲ ಜಗದಿ ಜೀವಿಸುತಿಹ ಜೀವಕೋಟಿ
ನೀನೇ ಜೀವಿಗಳ ಜೀವದಾಂತರ್ಯದ ಜೀವತತ್ವ
ನೀನೇ ಜೀವನು ಜೀವಿಪ ಜೀವನವೂ ಅದರ ಫಲವು
ನೀನೇ ಸಕಲವು ಎಂಬುದನರಿಯಲಿ ಈ ಆತ್ಮ ಹರಿಯೆ

ನೀನೇ ಲೋಕದಿ ತೋರುವ ಸಕಲರೂಪರಸಗಂಧವು
ನೀನೇ ಈ ಗಂಧರೂಪರಸಗಳನರಿಯುವ ಮನವು
ನೀನೇ ರಸಗಂಧ ರೂಪದನುಭವದಂತ್ಯದ ಫಲವು
ನೀನೇ ಸಕಲವು ಎಂಬುದನರಿಯಲಿ ಈ ಆತ್ಮ ಹರಿಯೆ

ನಿನ್ನೊಳೆಲ್ಲ ಮೊದಲಾದುದು ನಿನ್ನೊಳೆಲ್ಲ ನಿಂದಿಹುದು
ನಿನ್ನೊಳಯಸ್ಕಾಂತದಲ್ಲಿ ರೇಣು ರೇಣು ಎಂತು ಅಂತೆ
ನಿನ್ನ ಕಳೆಯನೊಂದಿ ಎಲ್ಲ ಅಮರವಾಗಿ ಇರುವ ಹದನ
ಚೆನ್ನಕೇಶವಾ ಅರಿಯುತೆ ನೆಮ್ಮದಿಯನು ಕಾಣಲಾತ್ಮ

# ಪದಗಳ ಅಕಾರಾದಿ

563—51. ಬೆಂಗಳೂರು ಸಿಟಿ ಬೆಂಗಳೂರು ಪ್ರೆಸ್ಸಿನಲ್ಲಿ ಸೂಪರಿಂಟೆಂಡೆಂಟರಾದ
ಜಿ. ಶ್ರೀನಿವಾಸರಾಯರವರು ಮುದ್ರಿಸಿರುವರು.

# ಶ್ರೀನಿವಾಸ ರಚಿತ

ಕೆಲವು ಸಣ್ಣ ಕತೆಗಳು
ಬಿನ್ನಹ (ಗೀತೆಗಳು)
ಶಾಂತಾ (ಸಣ್ಣ ದೃಶ್ಯ)
ಸಾವಿತ್ರಿ ( ,, )
ಸಣ್ಣ ಕತೆಗಳು
ಸಾಹಿತ್ಯ (ಉಪನ್ಯಾಸ)
ಅರುಣ (ಪದ್ಯಗಳು)
ವಿಮರ್ಶೆ ೧ (ಲೇಖನಗಳು)
ಉಷಾ (ಸಣ್ಣ ದೃಶ್ಯ)
ಸುಬ್ಬಣ್ಣ (ಕತೆ)
ತಾಳೀಕೋಟೆ (ಐತಿಹಾಸಿಕ ದೃಶ್ಯ)
ವಿಮರ್ಶೆ ೨ (ಲೇಖನಗಳು)
ನಾಲ್ಕು ಸಣ್ಣ ಕತೆಗಳು
ಕನ್ನಡದ ಸೇವೆ (ಭಾಷಣ)
ಮಂಜುಳಾ (ಸಾಮಾಜಿಕ ದೃಶ್ಯ)
ತಾವರೆ (ಪದ್ಯಗಳು)
ಕರ್ನಾಟಕದ ಜನತೆಯ ಸಂಸ್ಕೃತಿ
ಚೆಲುವು (ಪದ್ಯಗಳು)
ಶಿವ ಛತ್ರಪತಿ (ಐತಿಹಾಸಿಕ ದೃಶ್ಯ)
ವಿಮರ್ಶೆ ೩
ಯಶೋಧರಾ (ನಾಟಕ)
ನವರಾತ್ರಿ ೫
ಮಲಾರ (ಪದ್ಯಗಳು)
ಸಣ್ಣ ಕತೆಗಳು ೪
ರವೀಂದ್ರನಾಥ ಠಾಕೂರರು
ಸಣ್ಣ ಕತೆಗಳು ೫
ಶ್ರೀ ರಾಮಕೃಷ್ಣ
ತಿರುಪಾಣಿ (ಗೀತಪ್ರಧಾನ ನಾಟಕ)
ಕರ್ಣಾಟಕದ ಜನಪದ ಸಾಹಿತ್ಯ
ಕಾಕನಕೋಟೆ (ದೃಶ್ಯ)
ಆದಿಕವಿ ವಾಲ್ಮೀಕಿ
ವಿಮರ್ಶೆ ೪
ಸಣ್ಣ ಕತೆಗಳು ೬
ಗೌಡರ ಮಲ್ಲಿ (ಪದ್ಯ ಕಥೆ)
ರಾಮನವಮಿ ,,
ಮೂಕನ ಮಕ್ಕಳು ,,
ತಾಯ್ನುಡಿಯ ತಮ್ಮಡಿ (ಭಾಷಣ)
ನವರಾತ್ರಿ ೨, ೪ (ಕಥನ ಕವನ)
ಚಿತ್ರಾಂಗದಾ (ಭಾಷಾಂತರ)
ಸುನೀತ (ಪದ್ಯಗಳು)
ನವರಾತ್ರಿ ೩
ಪ್ರಸಂಗ (ಲೇಖನಗಳು)
ಸಣ್ಣ ಕತೆಗಳು ೭, ೮, ೯, ೧೦
ಚೆನ್ನಬಸವನಾಯಕ

(ಇಂಗ್ಲೀಷಿನಲ್ಲಿ)

Popular Culture in Karnataka
The Poetry of Valmiki
Short Stories (4 Vols.)
Subbanna (Story)
Rabindranath Tagore

---

ಈ ಪುಸ್ತಕಗಳು ದೊರೆಯುವ ಸ್ಥಳಗಳು :—

ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ, ಬೆಂಗಳೂರು ಸಿಟಿ
ಬೆಂಗಳೂರು ಪ್ರೆಸ್ ಬ್ರಾಂಚ್ ಡಿಪೊ, ಅವೆನ್ಯೂ ರೋಡ್,
"ಕೃಷ್ಣಾ ಬಿಲ್ಡಿಂಗ್ಸ್", ಬೆಂಗಳೂರು ಸಿಟಿ
ಜೀವನ ಕಾರ್ಯಾಲಯ, ಬಸವನಗುಡಿ, ಬೆಂಗಳೂರು
ಸಾಹಿತ್ಯ ಭಾಂಡಾರ, ಹುಬ್ಬಳ್ಳಿ

BANGALORE PRESS
LAKE VIEW
MYSORE RD
BANGALORE CITY